# ವ್ಯಾಕರಣ ಮಾರ್ಗ

ಹತ್ತನೆಯ ತರಗತಿ ವಿದ್ಯಾರ್ಥಿಗಳ ವ್ಯಾಕರಣ ಅಧ್ಯಯನ






ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ರೂಪನಗುಡಿ
ಬಳ್ಳಾರಿ ಪೂರ್ವವಲಯ ಬಳ್ಳಾರಿ ಜಿಲ್ಲೆ

ಕನ್ನಡವೆನೆ ಮನ ಮಿಡಿಯುವುದು

Scanned by CamScanner

# 1.ವರ್ಣಮಾಲೆಗಳು

**ವರ್ಣಮಾಲೆಗಳು(49)**

- **ಸ್ವರಗಳು (13)**
  - **ಹ್ರಸ್ವ(6)**: ಅ ಇ ಉ ಋ ಎ ಒ
  - **ದೀರ್ಘ(7)**: ಆ ಈ ಊ ಏ ಐ ಓ ಔ
- **ವ್ಯಂಜನಾಕ್ಷರಗಳು(34)**
  - **ವರ್ಗೀಯ (34)**
    - **ಅಲ್ಪಪ್ರಾಣ(10)**: ಕ್ ಗ್, ಚ್ ಜ್, ಟ್ ಡ್, ತ್ ದ್, ಪ್ ಬ್
    - **ಮಹಾಪ್ರಾಣ(10)**: ಖ್ ಘ್, ಛ ಝ್, ಠ್ ಢ್, ಥ್ ಧ್, ಫ್ ಭ್
    - **ಅನುನಾಸಿಕ(5)**: ಙ್ ಞ್ ಣ್ ನ್ ಮ್
  - **ಅವರ್ಗೀಯ(9)**: ಯ್ ರ್ ಲ್ ವ್ ಶ್ ಷ್ ಸ್ ಹ್ ಳ್
- **ಯೋಗವಾಹಗಳು(2)**
  - **ಅನುಸ್ವಾರ(1)**: ಂ
  - **ವಿಸರ್ಗ(1)**: ಃ

- ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು ಸ್ವರಗಳು–(13)
- ಸ್ವರಗಳ ಜೊತೆಯಲ್ಲಿ ಕೂಡಿಕೊಂಡು ಹೋಗುವ ಅಕ್ಷರಗಳು ಯೋಗವಾಹಗಳು–(2)
- ಸ್ವರಗಳ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು ವ್ಯಂಜನಗಳು–(34)
- ಏಕಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು ಹ್ರಸ್ವಸ್ವರಗಳು–(6)
- ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರಗಳು ದೀರ್ಘಸ್ವರಗಳು–(7)
- ಕಡಿಮೆ ಉಸಿರಿನಿಂದ ಉಚ್ಚರಿಸಲ್ಪಡುವ ಅಕ್ಷರಗಳು ಅಲ್ಪಪ್ರಾಣಗಳು–(10)
- ಹೆಚ್ಚು ಉಸಿರಿನಿಂದ ಉಚ್ಚರಿಸಲ್ಪಡುವ ಅಕ್ಷರಗಳು ಮಹಾಪ್ರಾಣಗಳು–(10)
- ನಾಸಿಕದ ಸಹಾಯದಿಂದ ಉಚ್ಚರಿಸುವ ಅಕ್ಷರಗಳು ಅನುನಾಸಿಕಗಳು–(5)
- ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಗುಣಿತಾಕ್ಷರ ಎಂದು ಕರೆಯುತ್ತಾರೆ.
- ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯಲಾಗುತ್ತದೆ.



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಕನ್ನಡ ವರ್ಣಮಾಲೆಯಲ್ಲಿನ ಸ್ವರಗಳು :

ಎ) 13 ಬಿ) 9 ಸಿ) 34 ಡಿ) 2

2) ಕನ್ನಡ ವರ್ಣಮಾಲೆಯಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು :

ಎ) ದೀರ್ಘಸ್ವರ ಬಿ) ಹ್ರಸ್ವಸ್ವರ ಸಿ) ಪ್ಲುತಸ್ವರ ಡಿ) ಸುಸ್ವರ

3) ತವರ್ಗದ ಅನುನಾಸಿಕ ಅಕ್ಷರ :

ಎ) ಣ ಬಿ) ನ ಸಿ) ಮ ಡಿ) ಙ

4) ಫ , ಭ – ಇವುಗಳು :

ಎ) ಅಲ್ಪಪ್ರಾಣಗಳು ಬಿ) ಅನುನಾಸಿಕಗಳು ಸಿ) ಮಹಾಪ್ರಾಣಗಳು ಡಿ) ಅವರ್ಗೀಯ ವ್ಯಂಜನಾಕ್ಷರಗಳು

5) ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರ :

ಎ) ಒತ್ತಾಕ್ಷರ ಬಿ) ಗುಣಿತಾಕ್ಷರ ಸಿ) ದೀರ್ಘಸ್ವರ ಡಿ) ಹ್ರಸ್ವಸ್ವರ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

6) ಸ್ವರಗಳು : 13 : : ಯೋಗವಾಹಗಳು : __________

7) ಭ : ಮವರ್ಗ : : ಫ : ____________

8) ಕ , ದ , ಬ : ಅಲ್ಪಪ್ರಾಣ : : ಫ , ಢ , ಥ :____________

9) ಬಾ : ಗುಣಿತಾಕ್ಷರ : : ದ್ದ : ____________

10) ಞ , ಙ ,ನ ,ಣ , ಮ : ಅನುನಾಸಿಕಗಳು : : ಯ ,ರ ,ಲ ,ವ : ______________

************************************************************************************

### ಉತ್ತರಗಳು :

**(1) ಎ) 13 (2) ಬಿ) ಹ್ರಸ್ವಸ್ವರ (3) ಬಿ) ನ (4) ಸಿ) ಮಹಾಪ್ರಾಣಗಳು (5) ಬಿ) ಗುಣಿತಾಕ್ಷರ**

**(6) 2 (7) ಕವರ್ಗ (8) ಮಹಾಪ್ರಾಣ (9) ಒತ್ತಾಕ್ಷರ (10) ಅವರ್ಗೀಯ**



Scanned by CamScanner

# 2.ಸಮಾಸಗಳು

**ಎರಡು ಅಥವಾ ಅನೇಕ ಪದಗಳನ್ನು ಅರ್ಥಕ್ಕನುಸಾರವಾಗಿ ಸೇರಿಸಿ ಒಂದೇ ಪದವನ್ನಾಗಿ ಮಾಡುವ ಪ್ರಕ್ರಿಯೆಯನ್ನು ಸಮಾಸ ಎನ್ನುತ್ತಾರೆ.**

**ಮೊದಲ ಪದ**–ಪೂರ್ವಪದ **ಎರಡನೆಯ ಪದ–**ಉತ್ತರಪದ

## ಸಮಾಸದ ವಿಧಗಳು

1) **ತತ್ಪುರುಷ ಸಮಾಸ : – ಪೂರ್ವಪದ – ನಾಮಪದ , ಉತ್ತರಪದ –ನಾಮಪದ (ಪ್ರಧಾನ)**

2) **ಕರ್ಮಧಾರೆಯ ಸಮಾಸ :– ಪೂರ್ವಪದ – ಗುಣವಾಚಕ , ಉತ್ತರಪದ –ನಾಮಪದ**

3) **ದ್ವಿಗು ಸಮಾಸ :– ಪೂರ್ವಪದ – ಸಂಖ್ಯಾವಾಚಕ , ಉತ್ತರಪದ –ನಾಮಪದ**

4) **ಅಂಶಿ ಸಮಾಸ :– ಅಂಶ ,ಅಂಶಿ**

5) **ದ್ವಂದ್ವ ಸಮಾಸ :– ಎಲ್ಲಾ ಪದಗಳ ಅರ್ಥ ಪ್ರಧಾನ**

6) **ಕ್ರಿಯಾ ಸಮಾಸ :– ಪೂರ್ವಪದ – ನಾಮಪದ , ಉತ್ತರಪದ –ಕ್ರಿಯಾಪದ**

7) **ಬಹುವ್ರೀಹಿ ಸಮಾಸ :– ಅನ್ಯಪದ ಪ್ರಧಾನ**

8) **ಗಮಕ ಸಮಾಸ :– ಪೂರ್ವಪದ – ಸರ್ವನಾಮ ಅಥವಾ ಕೃದಂತ ,ಉತ್ತರಪದ –ನಾಮಪದ**

---

## 1) ತತ್ಪುರುಷ ಸಮಾಸ

**ಪೂರ್ವಪದ – ನಾಮಪದ , ಉತ್ತರಪದ –ನಾಮಪದ ,ಉತ್ತರ ಪದ ಅರ್ಥ ಪ್ರಧಾನ**

**ನಾಮಪದ :–** ಯಾವುದೇ ಒಬ್ಬ ವ್ಯಕ್ತಿ,ಒಂದು ಸ್ಥಳ,ಒಂದು ವಸ್ತು,ಪ್ರಾಣಿ ಇತ್ಯಾದಿ ಹೆಸರುಗಳು.

**ಉದಾಹರಣೆ** : ರಾಮ, ಮನೆ, ಮರ,ಬೆಟ್ಟ,ತಾವರೆ,ದೈವ

| | | | |
|---|---|---|---|
| ಬೆಟ್ಟದಾವರೆ | ಧನಹರಣ | ಪೂದೋಟ | ದೈವಭಕ್ತಿ |
| ತಲೆನೋವು | ಪರಧನ | ಸ್ವಾಮಿದ್ರೋಹ | ಕಾಲುಬಳೆ |



Scanned by CamScanner

ಬೆಟ್ಟದ + ತಾವರೆ , ತಲೆಯಲ್ಲಿ + ನೋವು , ಧನದ + ಹರಣ , ಪರರ + ಧನ

ಪೂವಿನ + ತೋಟ ,ಸ್ವಾಮಿಗೆ + ದ್ರೋಹ , ದೈವದ + ಭಕ್ತಿ , ಕಾಲಿನ + ಬಳೆ

---

## 2) ಕರ್ಮಧಾರೆಯ ಸಮಾಸ

**ಪೂರ್ವಪದ – ಗುಣವಾಚಕ , ಉತ್ತರಪದ –ನಾಮಪದ**

**ಗುಣವಾಚಕ :–** ವಸ್ತುಗಳ ಗುಣ,ಸ್ವಭಾವ ರೀತಿಗಳನ್ನು ತಿಳಿಸುವ ಪದಗಳು.

**ಉದಾಹರಣೆ** : ಕೆಂಪು,ದೊಡ್ಡ, ಹಿರಿದು

| | | | |
|---|---|---|---|
| ಹೆಮ್ಮರ | ಹೊಸಗನ್ನಡ | ಪೆರ್ಮಗ | ನಲ್ಗುದುರೆ |
| ಇಮ್ಮಾವು | ಅತಿಕುಟಿಲ | ಪೆರ್ಮರ | ಕಟ್ಟೇಕಾಂತ |
| ಮೆಲ್ಮಾತು | ಹೆದ್ದೊರೆ | | |

ಹಿರಿದು + ಮರ

ಇರಿದು + ಮಾವು

ಮೆಲುವಾದ + ಮಾತು

ಹೊಸತು + ಕನ್ನಡ

ಅತಿಯಾದ + ಕುಟಿಲ

ಕಡಿದು + ಏಕಾಂತ

ಪಿರಿಯ + ಮಗ

ನಲ್ಲಿತು + ಕುದುರೆ

ಪಿರಿದು + ಮರ

ಹಿರಿದು + ತೊರೆ

---

## 3) ದ್ವಿಗು ಸಮಾಸ

**ಪೂರ್ವಪದ – ಸಂಖ್ಯಾವಾಚಕ , ಉತ್ತರಪದ –ನಾಮಪದ**

**ಸಂಖ್ಯಾವಾಚಕ :–** ಸಂಖ್ಯೆಯನ್ನು ಹೇಳುವ ಪದಗಳು

**ಉದಾಹರಣೆ** : ಒಂದು,ಎರಡು,ಮೂರು, ಷಟ್(ಷಣ್) ,ಸಪ್ತ



Scanned by CamScanner

| | | | |
|---|---|---|---|
| ಮೂಗಾವುದ | ಸಪ್ತಸ್ವರಗಳು | ಎಣ್ದೆಸೆ | ಷಟ್ಕೋನ |
| ಮುಕ್ಕಣ್ಣು | ಏಕಾಕ್ಷ | ಒಗ್ಗಟ್ಟು | ನಾಕಾಳು |

ಮೂರು +ಗಾವುದು    ಏಕ + ಅಕ್ಷ    ಷಟ್ + ಕೋನ

ಮೂರು +ಕಣ್ಣು    ಎಂಟು + ದೆಸೆ    ನಾಕು +ಆಳು

ಸಪ್ತಗಳಾದ +ಸ್ವರಗಳು    ಒಂದು + ಕಟ್ಟು

---

## 4) ಅಂಶಿ ಸಮಾಸ

**ಪೂರ್ವಪದ ಅಂಶ , ಉತ್ತರಪದ ಅಂಶಿ**

**ಅಂಶ:–** ಒಂದು ಭಾಗ

ಉದಾಹರಣೆ : ಕಾಲು.ತಲೆ

**ಅಂಶಿ:–** ಒಂದು ಭಾಗದಲ್ಲಿ ಮತ್ತೊಂದು ಭಾಗ

**ಉದಾಹರಣೆ** : ಹಿಂಗಾಲು.ಮುಂಗಾಲು

ಹಿಂದಲೆ,ಮುಂದಲೆ

| | | | |
|---|---|---|---|
| ಹಿಂಗಾಲು | ಅಂಗೈ | ಮುಂದಲೆ | ಹಿಂದಲೆ |
| ಮುಂಗಾಲು | ಮುಂಗೈ | ನಡುರಾತ್ರಿ | ನಟ್ಟಡವಿ |
| ಕಡೆಗಣ್ಣು | ತುದಿಬೆರಳು | ಕೆಳದುಟಿ | ತುದಿಮೂಗು |

ಕಾಲಿನ + ಹಿಂದೆ    ಕೈ + ಮುಂದೆ    ರಾತ್ರಿಯ + ನಡು

ಕಾಲಿನ + ಮಂದೆ    ತಲೆಯ + ಮುಂದೆ    ಕೈಯ + ಅಡಿ

ತಲೆಯ + ಹಿಂದೆ    ಅಡವಿಯ + ನಡು    ಬೆರಳಿನ + ತುದಿ

ಕಣ್ಣ+ಕಡೆ    ತುಟಿಯ + ಕೆಳಗೆ    ಮೂಗಿನ + ತುದಿ



Scanned by CamScanner

## 5) ದ್ವಂದ್ವ ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳಿದ್ದು , ಎಲ್ಲಾ ಪದಗಳ ಅರ್ಥ ಪ್ರಧಾನ

| | | | |
|---|---|---|---|
| ಗಿರಿವನದುರ್ಗಗಳು | ಮಾದ್ರಮಾಗಧಯಾದವರು | ಹನುಮಭೀಮರಾಮರು | ಭೀಮಾರ್ಜುನರು |
| ರಾಮಲಕ್ಷ್ಮಣರು | ಸೂರ್ಯಚಂದ್ರರು | ಕೆರೆಕಟ್ಟೆಬಾವಿಗಳು | ಲವಕುಶರು |

ಗಿರಿಯೂ+ವನವೂ+ದುರ್ಗವೂ

ಮಾದ್ರರೂ + ಮಾಗದರೂ +ಯಾದವರು

ಕರಿಯೂ+ತುರಗವೂ+ರಥವೂ

ಸೂರ್ಯನೂ +ಚಂದ್ರನೂ

ಹನುಮನೂ +ಭೀಮನೂ +ರಾಮನೂ

ಕೆರೆಯೂ +ಕಟ್ಟೆಯೂ +ಬಾವಿಯೂ

ಭೀಮನೂ +ಅರ್ಜುನನೂ

ಲವನೂ + ಕುಶನೂ

---

## 6) ಕ್ರಿಯಾ ಸಮಾಸ

ಪೂರ್ವಪದ – ನಾಮಪದ ಉತ್ತರಪದ –ಕ್ರಿಯಾಪದ

**ಕ್ರಿಯಾಪದ** :–ಭಾಷೆಯಲ್ಲಿ ಕ್ರಿಯೆಯನ್ನು (ಕಾರ್ಯ) ತಿಳಿಸುವ ಪದಗಳು

ಉದಾಹರಣೆ :– ತೆರೆ,ಮುಚ್ಚು,ಏರಿಸು,ಕೇಳಿ ಬರೆಯುತ್ತಾನೆ,ನೋಡುತ್ತಾನೆ.

| | | | |
|---|---|---|---|
| ಮೈಮುಚ್ಚು | ಕೈಕೊಳ್ಳುದು | ಕೈಯಾನು | ಬಿಲ್ಗೊಂಡು |
| ಕಣ್ದೆರೆ | ಕಂಗೆಡು | ಹೊಗೆದೋರು | ಸೂಲ್ಗೇಳಿ |
| ಬಲವಂದು | ಸಾಕ್ಷಿಮಾಡಿ | ಬಿಲ್ದಿರುವನೇರಿಸಿ | ಮೋಸಮಾಡು |

ಮೈಯನ್ನು+ಮುಚ್ಚು ಕೈಯನ್ನು + ಕೊಳ್ಳುದು ಕೈಯನ್ನು + ಆನು

ಕಣ್ಣನ್ನು+ತೆರೆ ಸಾಕ್ಷಿಯನ್ನು + ಮಾಡಿ ಹೊಗೆಯನ್ನು + ತೋರು

ಕಣ್ಣಿನಿಂದ +ಕೆಡು ಬಲಕ್ಕೆ + ಬಂದು ಸೊಲ್ಲನ್ನು + ಕೇಳಿ

ಬಿಲ್ಲನ್ನು + ಕೊಂಡು ಬಿಲ್ದಿರುವನ್ನು +ಏರಿಸಿ ಮೋಸವನ್ನು +ಮಾಡು



Scanned by CamScanner

## 7) ಬಹುವ್ರೀಹಿ ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳು ಸೇರಿ ಸಮಾಸವಾದಾಗ , ಅನ್ಯಪದ ಪ್ರಧಾನ

| | | | |
|---|---|---|---|
| ಹಣೆಗಣ್ಣ | ಘಟಸಂಭೂತ | ದನುಜರಿಪು | ಮದಾಂಧ |
| ಮುಕ್ಕಣ್ಣ | ಪವನನಂದನ | ಮುರಾರಿ | ಚಕ್ರಪಾಣಿ |
| ಗಾಂಡಿವಿ | ಮೇದಿನೀಪತಿ | ಅಬ್ಜೋದರ | ಇನತನೂಜ |
| ರಾಜೀವಸಖ | | | |

ಹಣೆಯಲ್ಲಿ ಕಣ್ಣು ಉಳ್ಳವನು ಆವನೋ ಅವನು –ಹಣೆಗಣ್ಣ–ಶಿವ

ಮೂರು ಕಣ್ಣು ಉಳ್ಳವನು ಆವನೋ ಅವನು ಮುಕ್ಕಣ್ಣ–ಶಿವ

ಚಕ್ರವು ಪಾಣಿಯಲ್ಲಿ ಆವನಿಗೋ ಅವನು ಚಕ್ರಪಾಣಿ–ವಿಷ್ಣು

ಉದರದಲ್ಲಿ ಕಮಲ ಉಳ್ಳವ ಅಬ್ಜೋದರ –ವಿಷ್ಣು

ಘಟದಲ್ಲಿ ಸಂಭೂತನಾದವನು ಆವನೋ ಅವನು ಘಟಸಂಭೂತ –ದ್ರೋಣ

ಗಾಂಡಿವವನ್ನು ಪಡೆದವನು ಆವನೋ ಅವನು ಗಾಂಡಿವಿ –ಅರ್ಜುನ

ಪವನನ ನಂದನ ಆವನೋ ಅವನು ಪವನನಂದನ – ಭೀಮ

ಇನನ ತನುಜ ಆವನೋ ಅವನು ಇನತನೂಜ –ಕರ್ಣ

ಧನಜರಿಗೆ ರಿಪು ಆವನೋ ಅವನು ದನುಜರಿಪು –ಕೃಷ್ಣ

ಮುರನ ಅರಿ ಆವನೋ ಅವನು ಮುರಾರಿ –ಕೃಷ್ಣ

ಮೇದಿನಿಗೆ ಪತಿ ಆವನೋ ಅವನು ಮೇದಿನೀಪತಿ –ರಾಜ

ರಾಜಿವನ ಸಖ ಆವನೋ ಅವನು ರಾಜೀವಸಖ –ಸೂರ್ಯ

ಮದದಿಂದ ಅಂದನು ಆವನೋ ಅವನು ಮದಾಂಧ

## 8) ಗಮಕ ಸಮಾಸ

ಪೂರ್ವಪದ – ಸರ್ವನಾಮ ಅಥವಾ ಕೃದಂತ ಉತ್ತರಪದ –ನಾಮಪದ

| | | | |
|---|---|---|---|
| ಆಕಲ್ಲು | ಈಬೆಕ್ಕು | ನೆಯ್ದವಸ್ತ್ರ | ಆ ಹುಡುಗ |

| | | | |
|---|---|---|---|
| ಅದು+ ಕಲ್ಲು | ಇದು+ಬೆಕ್ಕು | ನೆಯ್ದುದು +ವಸ್ತ್ರ | ಆ + ಹುಡುಗ |



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ದ್ವಂದ್ವ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

2) ಕರ್ಮಧಾರೆಯ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

3) 'ಮೆಲ್ಮಾತು' ಪದದಲ್ಲಿ ಏರ್ಪಟ್ಟ ಸಮಾಸ :

(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ಕ್ರಿಯಾ (ಡಿ) ಗಮಕ ಸಮಾಸ

4) ಕ್ರಿಯಾಸಮಾಸ ಸಮಾಸದ ಪದವಿದು :

(ಎ) ಬಿಲ್ದಿರುವನೇರಿಸಿ (ಬಿ) ತಲೆನೋವು (ಸಿ) ನೇಯ್ದುವಸ್ತ್ರ (ಡಿ) ಪೆರ್ಮಗ

5) 'ನಟ್ಟಡವಿ' ಪದದಲ್ಲಿ ಏರ್ಪಟ್ಟ ಸಮಾಸವಿದು :

(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ತತ್ಪುರುಷ (ಡಿ) ಬಹುವ್ರೀಹಿ ಸಮಾಸ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

6) ಹೊಗೆದೋರು : ಕ್ರಿಯಾಸಮಾಸ :: ಹೆದ್ದಾರಿ : _____

7) ಸ್ವಾಮಿದ್ರೋಹ :ತತ್ಪುರುಷ ಸಮಾಸ :: ಮುಂಗೈ : ________

8) ಹಣೆಗಣ್ಣ : ಬಹುವ್ರೀಹಿ :: ಬೆಟ್ಟದಾವರೆ : __________

9) ಬಿಲ್ಲನ್ನು + ಕೊಂಡು :ಬಿಲ್ಗೊಂಡು :: ತಲೆಯ + ಮುಂದೆ: ________________

10) ನೆಯ್ದುವಸ್ತ್ರ:ಗಮಕಸಮಾಸ :: ಸೂರ್ಯಚಂದ್ರರು :________________

**********************************************************************************

### ಉತ್ತರಗಳು:

**1) (ಸಿ) ಸೂರ್ಯಚಂದ್ರರು 2) (ಡಿ) ಪೆರ್ಮರ 3) (ಬಿ) ಕರ್ಮಧಾರೆಯ 4) (ಎ) ಬಿಲ್ದಿರುವನೇರಿಸಿ**

**5) (ಎ) ಅಂಶಿ 6) ಕರ್ಮಧಾರೆಯ 7) ಅಂಶಿ 8) ತತ್ಪುರುಷ ಸಮಾಸ**

**9) ಮುಂದಲೆ 10) ದ್ವಂದ್ವ ಸಮಾಸ**



Scanned by CamScanner

# 3.ಸಂಧಿಗಳು

ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಿಲ್ಲದೆ ಕೂಡಿಕೊಳ್ಳುವುದು 'ಸಂಧಿ'ಎಂದು ಅರ್ಥ

ಎರಡು ವರ್ಣಗಳು (ಅಕ್ಷರಗಳು) ಕಾಲವಿಳಂಬವಿಲ್ಲದಂತೆ ಸೇರುವುದೇ ಸಂಧಿಯೆನಿಸುವುದು.

* ಸ್ವರದ ಮುಂದೆ ಸ್ವರ ಬಂದು ಹೀಗೆ ಸಂಧಿಯಾದರೆ ಸ್ವರಸಂಧಿ ಎನ್ನುತ್ತೇವೆ.
* ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿಯಾದರೆ ವ್ಯಂಜನಸಂಧಿ ಎನ್ನುತ್ತೇವೆ.

## ಕನ್ನಡ ಸಂಧಿಗಳು

### ೧. ಲೋಪಸಂಧಿ

ಎರಡು ಪದಗಳನ್ನು ಕೂಡಿಸುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗುವುದು ಪೂರ್ವ ಪದದ ಅಂತ್ಯಕ್ಷರಕ್ಕೆ ಉತ್ತರ ಪದದ ಆದಿಯಲ್ಲಿನ ಸ್ವರ ಸೇರಿಕೊಳ್ಳುವುದು

(ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗುವುದು ಲೋಪಸಂಧಿ (ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುವುದು)
ಉದಾಹರಣೆಗೆ:-

ಊರು + ಅಲ್ಲಿ = ಊರಲ್ಲಿ
(ಉ + ಅ) (ಉಕಾರ ಲೋಪ)

ಪೂರ್ವಪದದ ಅಂತ್ಯದಕ್ಷರ "ರು" ಈ ಅಕ್ಷರದ ಅಂತ್ಯದಲ್ಲಿರುವ "ಉ" ಸ್ವರ ಲೋಪ ಆಗಿ ಉತ್ತರ ಪದದ ಆದಿ ಸ್ವರ "ಅ" ಸೇರಿಕೊಂಡು " ರ " ಆಗಿದೆ

| ಲೋಪ ಸಂಧಿ | | |
|---|---|---|
| ಊರೂರು | ಸಂಪನ್ನರಾದ | ಪೊಳ್ದಡೆ |
| ಬಲ್ಲೆನೆಂದು | ಆದನೆಂಬ | ತೆರೆದಿಕ್ಕುವ |
| ಮಾತಂತು | ನೆತ್ತರೊಂದೆ | ಮನದೊಳಗೆ |
| ಕಾಣಲಾಗದು | ತಪ್ಪಲೀಯದೆ | ಇರುಳಳಿದು |
| ಚರಿಸುತದ್ವರದ | ಲೇಖನವನೋದಿ | ತೆಗೆದುತ್ತರೀಯಮಂ |
| ಬೇಡಬೇಡರಸುಗಳ | ನಿಂತಿರ್ದನು | ಜೀವತೆತ್ತವರು |



Scanned by CamScanner

ಊರು+ಊರು , ಸಂಪನ್ನರು+ಆದ , ಪೂಳ್ದು+ಎಡೆ , ಬಲ್ಲೆನು+ಎಂದು ,ಆದನು+ಎಂಬ ತೆರೆದು+ಇಕ್ಕುವ , ಮಾತು+ಅಂತು , ನೆತ್ತರು+ ಒಂದೆ , ಮನದ+ ಒಳಗೆ ಕಾಣಲು+ಆಗದು ,ತಪ್ಪಲು+ಈಯದೆ ,ಇರುಳು+ಅಳಿದು ,ಚರಿಸುತ+ಅದ್ವರದ,ಲೇಖನವನು+ಓದಿ , ತೆಗೆದು+ಉತ್ತರೀಯಮಂ ಬೇಡಬೇಡ+ಅರಸುಗಳ ,ನಿಂತು+ಇರ್ದನು ,ಜೀವತೆತ್ತ+ಅವರು , ಕಾದಾಟದ+ದಾಟ

## ೨. ಆಗಮ ಸಂಧಿ

ಎರಡು ಪದಗಳನ್ನು ಕೂಡಿಸುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗಿ ಪೂರ್ವ ಪದದ ಅಂತ್ಯಕ್ಷರಕ್ಕೆ ಉತ್ತರ ಪದದ ಆದಿಯಲ್ಲಿನ ಸ್ವರ ಸೇರಿಕೊಂಡಾಗ ಅರ್ಥವು ಕೆಡುವಂತಿದ್ದಲ್ಲಿ ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿಕೊಳ್ಳಬೇಕು.

(ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ 'ಆಗಮ ಸಂಧಿ' ಎನ್ನುವರು)

| ಆಗಮ | |
|---|---|
| ಕೈಯನ್ನು | ಮರವನ್ನು |
| ಮಳೆಯಿಂದ | ಮಗುವಿಗೆ |
| ಶಾಲೆಯಲ್ಲಿ | ಮನೆಯೊಳಗೆ |
| ಭೇದವಿಲ್ಲ | ಕೈವಿಡಿದು |
| ವೃದ್ಧಿಯಾಗಿ | ಭೇದವಾಗಿ |
| ಶವವಾದವು | |

ಕೈ + ಅನ್ನು , ಮರ+ ಅನ್ನು , ಮಳೆ+ಇಂದ , ಮಗು+ಇಗೆ , ಶಾಲೆ+ಅಲ್ಲಿ , ಮನೆ+ಒಳಗೆ ,ಭೇದ+ಇಲ್ಲ ,ಕೈ+ಇಡಿದು ,ವೃದ್ಧಿ+ಆಗಿ ,ಭೇದ+ಆಗಿ ,ಶವ+ಆದವು

ಕೈ + ಅನ್ನು = ಕೈ + ಯ್ + ಅನ್ನು = ಕೈಯನ್ನು ,

(ಕೈ+ಅನ್ನು ಕೂಡಿಸಿಗಾಗ ಕೈನ್ನು ಆಗುತ್ತದೆ. ಆದರೆ ಇದರ ಅರ್ಥ ಕೆಡುತ್ತದೆ. ಹಾಗೆ ಮಾಡದೆ "ಯ್ " ಅಕ್ಷರವನ್ನು ಹೊಸದಾಗಿ ಸೇರಿಸಬೇಕು.)

ಮಳೆ + ಇಂದ = ಮಳೆ + ಯ್ + ಇಂದ = ಮಳೆಯಿಂದ

ಮಗು + ಇಗೆ = ಮಗು + ವ್ + ಇಗೆ = ಮಗುವಿಗೆ



Scanned by CamScanner

## ೩. ಆದೇಶ ಸಂಧಿ

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ (ಸ್ಥಳದಲ್ಲಿ) ಬೇರೊಂದು ಅಕ್ಷರವು ಬರುವುದೇ ಆದೇಶ ಸಂಧಿಯೆನಿಸುವುದು.

(ಸಾಮಾನ್ಯವಾಗಿ ಉತ್ತರಪದದ ಆದಿಯಲ್ಲಿರುವ ಕ ತ ಪ ವ್ಯಂಜನಗಳಿಗೆ ಕ್ರಮವಾಗಿ ಗ ದ ಬ ವ್ಯಂಜನಗಳು ಆದೇಶವಾಗಿ ಬರುತ್ತವೆ. ಕೆಲವೊಂದು ಸಲ 'ಪ ಬ ಮ ' ಗಳಿಗೆ 'ವ ' ಕಾರ ಆದೇಶವಾಗುತ್ತದೆ. ಸ ಕಾರಕ್ಕೆ ಚ ಜ ಛ ಗಳು ಆದೇಶವಾಗುತ್ತವೆ.)

| ಆದೇಶ ಸಂಧಿ | | |
|---|---|---|
| ಮಳೆಗಾಲ | ಕಡುವೆಳ್ಪು | ಧೃತಿಗೆಟ್ಟು |
| ಮೈದೋರು | ಮೆಲ್ವಾತು | ಪೋಗಲ್ವೇಳ್ಕುಂ |
| ಬೆಂಬತ್ತು | ಹೊಸಗಾಲ | ಕೈವಿಡಿದು |
| ಕಂಗೆಟ್ಟು | ಕಂಬನಿ | ಮೈದೊಳೆ |
| ಇಂಚರ | ಬೆಮರ್ವನಿ | ಬೆಟ್ಟದಾವರೆ |

ಮಳೆ + ಕಾಲ , ಕಡು+ಪೆಳ್ಪು ,ಧೃತಿ+ಕೆಟ್ಟು , ಮೈ+ತೋರು ,ಮೇಲ್+ಮಾತು ,ಪೋಗಲ್+ಪೇಳ್ಕುಂ ,

ಬೆನ್+ಪತ್ತು .ಹೊಸ+ಕಾಲ ಕೈ+ಹಿಡಿದು ,ಕಣ್ + ಕೆಟ್ಟು ,ಕಣ್ + ಪನಿ = ಕಂಬನಿ ,ಮೈ+ತೊಳೆ

ಇನ್+ಸರ ,ಬೆಮರ್ + ಪನಿ ,ಬೆಟ್ಟದ+ತಾವರೆ

## ಸಂಸ್ಕೃತ ಸಂಧಿಗಳು

### ಸಂಸ್ಕೃತ ಸ್ವರ ಸಂಧಿಗಳು

- ✓ ಎರಡು ಸಂಸ್ಕೃತ ಶಬ್ದಗಳು ಸೇರಿ ಸಂಧಿಯಾದರೆ ಸಂಸ್ಕೃತ ಸಂಧಿ ಆಗುತ್ತದೆ.
- ✓ ಒಂದು ಸಂಸ್ಕೃತ ಶಬ್ದವು ಕನ್ನಡ ಶಬ್ದದೊಡನೆ ಸೇರಿ ಸಂಧಿಯಾದರೆ ಕನ್ನಡ ಸಂಧಿ ಆಗುತ್ತದೆ.
- ✓ ಸಂಸ್ಕೃತದಲ್ಲಿ ಸ್ವರಕ್ಕೆ ಸ್ವರ ಪರವಾದಾಗ ಸ್ವರಸಂಧಿಗಳಾಗುತ್ತವೆ.
- ✓ ವ್ಯಂಜನಕ್ಕೆ ವ್ಯಂಜನ ಪರವಾದಾಗ ವ್ಯಂಜನ ಸಂಧಿಗಳಾಗುತ್ತವೆ.



Scanned by CamScanner

## ೧. ಸವರ್ಣ ದೀರ್ಘ ಸಂಧಿ

ಸವರ್ಣಸ್ವರಗಳು(ಅಆ,ಇಈ,ಉಊ ಋಋ)ಒಂದರ ಮುಂದೆ ಮತ್ತೊಂದು (ಅ+ಅ,ಅ+ಆ,ಅ+ಅ..ಇ+ಇ..) ಬಂದಾಗ ಅವೆರಡರ ಸ್ಥಾನದಲ್ಲಿ ಒಂದೇ ದೀರ್ಘಸ್ವರವು(ಆ,ಈ,ಊ) ಆದೇಶವಾಗಿ ಬರುವುದು ಸವರ್ಣ ದೀರ್ಘಸಂಧಿ

ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ

(ಆ + ಅ) = ಆ

ಇಲ್ಲಿ 'ಆ' ಎಂಬ ಸ್ವರದ ಮುಂದೆ 'ಅ' ಎಂಬ ಸ್ವರ ಬಂದಿದೆ. ಈ ಎರಡೂ ಸ್ವರಗಳು ಸವರ್ಣ ಸ್ವರಗಳು ಇವು ಹೀಗೆ ಒಂದರ ಮುಂದೆ ಒಂದು ಬಂದಿವೆ. ಅವೆರಡೂ ಹೋಗಿ ಅವುಗಳ ಸ್ಥಾನದಲ್ಲಿ ಅದೇ ಸವರ್ಣಗಳ ಒಂದು ದೀರ್ಘಸ್ವರವು ಬಂದಿದೆ.

ಉದಾಹರಣೆಗೆ:-

| ಸವರ್ಣ ದೀರ್ಘ ಸಂಧಿ | | |
|---|---|---|
| ಮಹಾತ್ಮ | ವಧೂಪೇತ | ಸಕಳಾಚಾರ್ಯ |
| ಗಿರೀಶ | ನಿಜಾಶ್ರಮ | ಚಂದ್ರಾರ್ಕ |
| ಸುರಾಸುರ | ಜಿನಾಲಯ | ಲಕ್ಷ್ಮೀಶ |

ಮಹಾ + ಆತ್ಮಾ , ವಧೂ+ಉಪೇತ , ಸಕಳ+ಆಚಾರ್ಯ ,ಗಿರಿ+ಈಶ ,ನಿಜ+ಆಶ್ರಮ ,ಚಂದ್ರ+ಅರ್ಕ ,ಸುರ + ಅಸುರ ,ಜಿನ+ಆಲಯ ,ಲಕ್ಷ್ಮಿ+ಈಶ

## (೨) ಗುಣಸಂಧಿ

ಅ ಆ ಕಾರಗಳಿಗೆ ಇ ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಕಾರವೂ, ಋ ಕಾರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ಗುಣಸಂಧಿ' ಎಂದು ಹೆಸರು.

| ಗುಣ ಸಂಧಿ | | |
|---|---|---|
| ದೇವೇಂದ್ರ | ಮಹರ್ಷಿ | ಮಂಡಳೇಶ್ವರ |
| ಜ್ಞಾನೇಶ್ವರ | ಮಹೇಶ | ಸೂರ್ಯೋದಯ |
| ಕಲೋಪಾಸಕ | | |



Scanned by CamScanner

ದೇವ + ಇಂದ್ರ , ಮಹಾ + ಋಷಿ , ಮಂಡಳ + ಈಶ್ವರ ,ಜ್ಞಾನ+ಈಶ್ವರ, ಮಹಾ + ಈಶ ಸೂರ್ಯ + ಉದಯ , ಕಲಾ+ಉಪಾಸಕ

## (೩) ವೃದ್ಧಿ ಸಂಧಿ

ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ, ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ವೃದ್ಧಿಸಂಧಿ' ಎನ್ನುವರು.

| ವೃದ್ಧಿ ಸಂಧಿ | | | |
|---|---|---|---|
| ಏಕೈಕ | ಜನೈಕ್ಯ | ವನೌಷಧಿ | ಅಷ್ಟೈಶ್ವರ್ಯ |

ಏಕ + ಏಕ ,ಅಷ್ಟ + ಐಶ್ವರ್ಯ ,ವನ + ಔಷಧ , ಜನ + ಐಕ್ಯ

## (೪) ಯಣ್ ಸಂಧಿ

ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ ಈ ಕಾರಗಳಿಗೆ 'ಯ್' ಕಾರವೂ, ಉ ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್' (ರೇಫ)ವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ ಯಣ್ ಸಂಧಿಯೆಂದು ಹೆಸರು.

| ಯಣ್ ಸಂಧಿ | | | |
|---|---|---|---|
| ಅತ್ಯವಸರ | ಜಾತ್ಯತೀತ | ಕೋಟ್ಯಾಧೀಶ್ವರ | ಕೋಟ್ಯಾನುಕೋಟಿ |

ಅತಿ + ಅವಸರ ,ಜಾತಿ + ಅತೀತ, ಕೋಟಿ + ಅಧೀಶ್ವರ ,ಕೋಟಿ+ ಅನುಕೋಟಿ

### ಸಂಸ್ಕೃತ ವ್ಯಂಜನ ಸಂಧಿಗಳು

## (೧) ಜಶ್ತ್ವಸಂಧಿ

ಪೂರ್ವಶಬ್ದದ ಕೊನೆಯಲ್ಲಿರುವ ಕಚಟತಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಪ್ರಾಯಶಃ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು ಆದೇಶಗಳಾಗಿ ಬರುತ್ತವೆ. ಇದಕ್ಕೆ ಜಶ್ತ್ವಸಂಧಿಯೆನ್ನುವರು.

| ಜಶ್ತ್ವ ಸಂಧಿ | | | |
|---|---|---|---|
| ವಾಗ್ದೇವಿ | ಅಜಂತ | ಷಡಾನನ | ದಿಗಂತ |
| ಅಬ್ಧಿ | | | |

ವಾಕ್+ದೇವಿ, ಅಚ್ + ಅಂತ , ಷಟ್+ ಆನನದಿಕ್ + ಅಂತ , ಅಪ್ + ಧಿ



Scanned by CamScanner

## (೨) ಶ್ಚುತ್ವ ಸಂಧಿ

ಸಕಾರ,ತವರ್ಗಾಕ್ಷರಗಳಿಗೆ ಶಕಾರ ಚವರ್ಗಾಕ್ಷರಗಳು ಪರವಾದಾಗ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ.

'ಶ್ಚು' ಎಂದರೆ ಶಕಾರ ಚವರ್ಗಾಕ್ಷರಗಳು. (ಶ್=ಶಕಾರ, ಚು=ಚ ಛ ಜ ಝ ಞ) ಇವುಗಳು ಆದೇಶವಾಗಿ ಬರುವುದೇ ಶ್ಚುತ್ವಸಂಧಿ ಎನಿಸುವುದು.

| ಶ್ಚುತ್ವ ಸಂಧಿ |
|---|
| ಶರಚ್ಚಂದ್ರ |
| ಜಗಜ್ಜ್ಯೋತಿ |
| ಪಯಶ್ಶಯನ |

ಶರತ್ + ಚಂದ್ರ ಜಗತ್ + ಜ್ಯೋತಿ ಪಯಸ್ + ಶಯನ

## (೩) ಅನುನಾಸಿಕ ಸಂಧಿ

ವರ್ಗ ಪ್ರಥಮ ವರ್ಣಗಳಿಗೆ ಯಾವ ಅನುನಾಸಿಕಾಕ್ಷರ ಪರವಾದರೂ, ಅವುಗಳಿಗೆ ಅಂದರೆ ಕ ಚ ಟ ತ ಪ ವ್ಯಂಜನಗಳಿಗೆ ಕ್ರಮವಾಗಿ ಙ ಞ ಣ ನ ಮ ವ್ಯಂಜನಗಳು ಆದೇಶಗಳಾಗಿ ಬರುತ್ತವೆ.

| ಅನುನಾಸಿಕ |
|---|
| ಷಣ್ಮುಖ |
| ಸನ್ಮಾನ |
| ವಾಙ್ಮಯ |
| ಉನ್ಮಾದ |
| ತನ್ಮಯ |
| ಶ್ರೀಮನ್ಮಹಾ |

ಷಟ್+ ಮುಖ , ಸತ್ + ಮಾನ
ವಾಕ್ + ಮಯ , ಉತ್+ಮಾದ,
ತತ್+ಮಯ , ಶ್ರೀಮತ್+ಮಹಾ



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಹೊಸಗನ್ನಡ ಪದವು ಈ ಸಂಧಿಗೆ ಉದಾಹರಣೆ :
   (ಎ) ಲೋಪ (ಬಿ) ಆಗಮ
   (ಸಿ) ಆದೇಶ (ಡಿ) ಗುಣಸಂಧಿ
2) ಸನ್ಮಾನ–ಪದವು ಈ ಸಂಧಿಗೆ ಉದಾಹರಣೆ :
   (ಎ) ಅನುನಾಸಿಕಸಂಧಿ (ಬಿ) ಆಗಮಸಂಧಿ
   (ಸಿ) ಜಶ್ತ್ವಸಂಧಿ (ಡಿ) ಸವರ್ಣದೀರ್ಘಸಂಧಿ
3) ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗಿರುವ ಪದ :
   (ಎ) ಏಕೈಕ (ಬಿ) ಮಂಡಳೇಶ್ವರ
   (ಸಿ) ಅತ್ಯವಸರ (ಡಿ) ದಿಗಂತ
4) ಸವರ್ಣದೀರ್ಘಸಂಧಿ ಪದ :
   (ಎ) ಜಿನಾಲಯ (ಬಿ) ವಾಗ್ದೇವಿ
   (ಸಿ) ಮಳೆಗಾಲ (ಡಿ) ಬಲ್ಲೆನೆಂದು
5) ಪೂಳ್ದಡೆ – ಪದವು ಈ ಸಂಧಿಗೆ ಉದಾಹರಣೆಯಾಗಿದೆ :
   (ಎ) ಅನುನಾಸಿಕಸಂಧಿ (ಬಿ) ಆಗಮಸಂಧಿ
   (ಸಿ) ಲೋಪಸಂಧಿ (ಡಿ) ಗುಣಸಂಧಿ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

6) ಮಹರ್ಷಿ : ಗುಣಸಂಧಿ :: ಷಡಾನನ : ______
7) ನೆತ್ತರೊಂದೆ : ಲೋಪಸಂಧಿ :: ಹೊಸಗಾಲ : ______
8) ಬೇಧವಿಲ್ಲ : ಆಗಮಸಂಧಿ :: ಏಕೈಕ : _______________
9) ಅಜಂತ : ಜಶ್ತ್ವಸಂಧಿ :: ಅತ್ಯವಸರ :_______________
10) ಆದೆನೆಂಬ : ಆದೆನು+ ಎಂಬ :: ಲೇಖನವನೋದಿ :_____________

## ಉತ್ತರಗಳು :

**1) (ಸಿ) ಆದೇಶ 2) (ಎ) ಅನುನಾಸಿಕಸಂಧಿ 3) (ಬಿ) ಮಂಡಳೇಶ್ವರ 4) (ಎ) ಜಿನಾಲಯ**

**5) (ಸಿ) ಲೋಪಸಂಧಿ 6) ಜಶ್ತ್ವಸಂಧಿ 7) ಆದೇಶಸಂಧಿ 8) ವೃದ್ಧಿಸಂಧಿ**

**9) ಯಣ್ ಸಂಧಿ 10) ಲೋಪಸಂಧಿ**



Scanned by CamScanner

# 4.ತದ್ಧಿತಾಂತಗಳು

**ನಾಮಪದಗಳಿಗೆ ಬೇರೆಬೇರೆ ಅರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳು.**

**( ನಾಮಪದಗಳ ಮೇಲೆ ಮಾತ್ರ ತದ್ಧಿತ ಪ್ರತ್ಯಗಳು ಬರುತ್ತವೆ. ನಾಮಪದಗಳನ್ನು ಗುರುತಿಸಿಕೊಳ್ಳಿ)**

## ತದ್ಧಿತಾಂತಗಳ ವಿಧಗಳು

| |
|---|
| 1) ತದ್ಧಿತಾಂತನಾಮ |
| 2) ತದ್ಧಿತಾಂತ ಭಾವನಾಮ |
| 3) ತದ್ಧಿತಾಂತ ಅವ್ಯಯ |

## 1) ತದ್ಧಿತಾಂತನಾಮ

**ನಾಮಪದಗಳಿಗೆ ಇಗ, ಅಡಿಗ, ಕಾರ, ಕೋರ, ಗಾರ, ವಂತ, ವಾಳ, ವಳ, ಅಳಿ,ಗುಳಿ,ಅರ, ಅನೆಯ – ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತನಾಮ ಎನ್ನುವರು**

**(ಗುರುತಿಸುವಿಕೆ : ಇವುಗಳು ವ್ಯಕ್ತಿಗಳನ್ನು ಸೂಚಿಸುತ್ತವೆ. ವ್ಯಕ್ತಿಗಳನ್ನು ನೆನಪಿಸಿಕೊಳ್ಳಿ)**

| ತದ್ಧಿತಾಂತನಾಮ | | | |
|---|---|---|---|
| ಪುಲ್ಲಿಂಗ | | | ಸ್ತ್ರೀಲಿಂಗ |
| • ಬಳೆಗಾರ | • ಲೆಕ್ಕಿಗ | • ಓಲೆಕಾರ | • ಬಳೆಗಾರ್ತಿ |
| • ಕೋಲುಕಾರ | • ಸಾಲಗಾರ | • ಹಾವಾಡಿಗ | • ಕೋಲುಕಾರ್ತಿ |
| • ಕನ್ನಡಿಗ | • ಗುಣವಂತ | • ಲಂಚಕೋರ | • ಕನ್ನಡತಿ |
| • ಸಿರಿವಂತ | • ಬುದ್ಧಿವಂತ | • ಹೂವಾಡಿಗ | • ಸಿರಿವಂತೆ |
| • ಒಕ್ಕಲಿಗ | • ಮಡಿವಾಳ | • ಕುಂಬಾರ | • ಒಕ್ಕಲಗಿತ್ತಿ |
| • ಮಾಲೆಗಾರ | • ವಾಚಾಳಿ | • ಸಾಲಗಾರ | • ಮಾಲೆಗಾರ್ತಿ |
| • ಬೇಟೆಗಾರ | • ಲಂಚಗುಳಿ | | |



Scanned by CamScanner

## 2) ತದ್ಧಿತಾಂತ ಭಾವನಾಮ

ನಾಮಪದಗಳ ಮುಂದೆ ಭಾವಾರ್ಥಗಳಲ್ಲಿ – ತನ,ಇಕೆ,ಪು,ಮೆ, ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತಭಾವನಾಮ ಎನ್ನುವರು

(ಗುರುತಿಸುವಿಕೆ : ವ್ಯಕ್ತಿಯ ಸ್ಥಿತಿಯನ್ನು ನೆನೆಪಿಸುತ್ತವೆ.)

| ತದ್ಧಿತಾಂತ ಭಾವನಾಮ | |
|---|---|
| • ಜಾಣತನ | • ಜಾಣ್ಮೆ |
| • ಚೆಲುವಿಕೆ | • ಹಿರಿಮೆ |
| • ಕಪ್ಪು | • ದೊಡ್ಡತನ |
| • ಪೆರ್ಮೆ | • ಬಡತನ |
| • ಸಿರಿತನ | • ಹೊಸತನ |

## 3) ತದ್ಧಿತಾಂತ ಅವ್ಯಯ

ನಾಮಪದಗಳ ಮುಂದೆ ಅಂತೆ, ವೋಲ್, ವೋಲು, ತನಕ, ವರೆಗೆ, ಇಂತ, ಆಗಿ, ಓಸುಗ, ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯಗಳಾಗುತ್ತವೆ.

(ಗುರುತಿಸುವಿಕೆ : ತದ್ಧಿತಾಂತ ಅವ್ಯಯಗಳಾದ ಮೇಲೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿದರೆ ಸೇರುವುದಿಲ್ಲ ಗಮನಿಸಿ)

| ತದ್ಧಿತಾಂತ ಅವ್ಯಯ | |
|---|---|
| • ಚಂದ್ರನಂತೆ | • ಅವನಂತೆ |
| • ಚಂದ್ರನವೊಲ್ | • ಅವನವೊಲ್ |
| • ನನ್ನವೊಲು | • ಅವಳವೊಲು |
| • ಮನೆಯವೋಲು | • ಇದರವೋಲ್ |
| • ಕರಡಿವೋಲ್ | • ನದಿಯವೋಲ್ |
| • ಮನೆಯತನಕ | • ಹಿಮಾಲಯದತನಕ |
| • ಶಾಲೆಯವರೆಗೆ | • ಪಟ್ಟಣದವರೆಗೆ |
| • ಇವಳಮಟ್ಟಿಗೆ | • ಸುಂದರನಮಟ್ಟಿಗೆ |
| • ನನಗೋಸ್ಕರ | • ಬೆಕ್ಕಿಗೋಸ್ಕರ |
| • ರಾಧೆಗಿಂತ | • ಅದಕ್ಕಿಂತ |
| • ನಿನಗಾಗಿ | • ಇದಕ್ಕಾಗಿ |
| • ಮದುವೆಗೋಸುಗ | • ಕಾಗೆಗೋಸುಗ |



Scanned by CamScanner

# 5.ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳಾಗುತ್ತವೆ.

ಧಾತು : ಕ್ರಿಯಾಪದದ ಮೂಲರೂಪ ಧಾತು

(ಕ್ರಿಯಾಪದಗಳನ್ನು ನೆನಪಿಸಿಕೊಳ್ಳಿ )

ಉದಾ: ಓಡು , ತಿನ್ನು , ಬರೆ

**ಕೃದಂತಗಳ ವಿಧಗಳು**

| |
|---|
| 1) ಕೃದಂತನಾಮ |
| 2) ಕೃದಂತ ಭಾವನಾಮ |
| 3) ಕೃದಂತಾವ್ಯಯ |

## 1) ಕೃದಂತನಾಮ

ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್ಯ ಪ್ರತ್ಯಯ ಸೇರಿ ಆಗುವ ಪದಗಳನ್ನು' ಕೃದಂತನಾಮಗಳು ' ಎನ್ನುವರು. ಧಾತುವಿಗೂ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ಕಾಲಸೂಚಕ ಪ್ರತ್ಯಯಗಳು ಸೇರಿಕೊಳ್ಳುತ್ತವೆ

ಉದಾ: ಓಡು+ವ+ಅ= ಓಡವ , ಓಡು+ದ+ಅ=ಓಡಿದ , ಓಡ+ಅದ+ಅ=ಓಡದ

(ಗುರುತಿಸುವಿಕೆ : ಧಾತುಗಳ ಮೇಲೆ ಕಾಲಸೂಚಕ ಪ್ರತ್ಯಯಗಳು (ವ,ಉವ,ದ,ಅದ) ಬಂದು ಕೃತ್ ಪ್ರತ್ಯಯಗಳು (ಅ) ಕೊನೆಯಲ್ಲಿ ಇರುತ್ತವೆ. ವ್ಯಕ್ತಿಯ ಕ್ರಿಯೆಯನ್ನು ನೆನಪಿಸಿಕೊಳ್ಳಿ )

| ವರ್ತಮಾನ ಕೃದಂತ | ಭೂತ ಕೃದಂತ | ನಿಷೇಧ ಕೃದಂತ |
|---|---|---|
| ' ವ ' ' ಉವ ' | ' ದ ' | ' ಅದ ' |
| • ಓಡುವ | • ಓಡಿದ | • ಓಡದ |
| • ಬಾಳುವ | • ಬಾಳಿದ | • ಬಾಳದ |
| • ಬರೆಯುವ | • ಬರೆದ | • ಬರೆಯದ |
| • ತಿನ್ನುವ | • ತಿಂದ | • ತಿನ್ನದ |
| • ನಡೆಯುವ | • ನಡೆದ | • ನಡೆಯದ |



Scanned by CamScanner

## 2) ಕೃದಂತ ಭಾವನಾಮ

ಧಾತುಗಳಿಗೆ ಭಾವಾರ್ಥದಲ್ಲಿ ಇಕೆ,ಇಗೆ,ಗೆ,ತ,ಟ,ಇತ,ಅವು,ವು,ಕೆ,ತೆ,ಪು,ವಳಿಕೆ,ವಣಿಗೆ ಮುಂತಾದ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಾಗುತ್ತವೆ.

(ಗುರುತಿಸುವಿಕೆ : ಕ್ರಿಯೆಯ ಭಾವವನ್ನು ನೆನೆಯಿರಿ . ಉದಾ : ಓಡುವ ಕ್ರಿಯೆಯ ಭಾವ –ಓಟ)

| | |
|---|---|
| • ಓಟ | • ನೋಟ |
| • ಬಾಳುವಿಕೆ | • ಬರೆಯುವಿಕೆ |
| • ಅಂಜಿಕೆ | • ನಂಬಿಕೆ |
| • ಉಡುಗೆ | • ತೊಡುಗೆ |
| • ನಗುವುದು | • ತಿನ್ನುವುದು |
| • ನೆನಪು | • ಮೆರವಣಿಗೆ |
| • ಹೋಲಿಗೆ | • ನೋವು |
| • ಮಾಟ | • ತಿನ್ನವಿಕೆ |
| • ನಡೆತ | • ಒಪ್ಪಿತ |

## 3) ಕೃದಂತಾವ್ಯಯ

ಧಾತುಗಳ ಮೇಲೆ ಉತ್ತ, ಅದೆ, ದರೆ, ಅಲು, ಅಲಿಕೆ, ಅ, ಇ, ದು ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಗಳಾಗುತ್ತವೆ.

(ಗುರುತಿಸುವಿಕೆ : ಕೃದಂತಾವ್ಯಯಗಳಾದ ನಂತರ ವಿಭಕ್ತಿ ಪ್ರತ್ಯಯ ಹತ್ತುವುದಿಲ್ಲ ಮಾಡಿನೋಡಿ)

(ಇವುಗಳನ್ನು ಬಳಸಿಕೊಂಡುವಾಕ್ಯ ರಚಿಸಿದರೆ( ಸ್ತ್ರೀಲಿಂಗ,ಪುಲ್ಲಿಂಗ /ಕಾಲ/ವಚನ ದಲ್ಲೂ ಬದಲಾಗುವುದಿಲ್ಲ)

| | |
|---|---|
| • ಮಾಡುತ್ತ | • ತಿನ್ನುತ್ತ |
| • ಮಾಡದೆ | • ಬರದೆ |
| • ಮಾಡಲು | • ನೋಡಲು |
| • ಮಾಡಲಿಕ್ಕೆ | • ಕೇಳಿ |
| • ಮಾಡ | • ಕೇಳಲಿಕ್ಕೆ |
| • ಮಾಡಿ | • ನೋಡ |
| • ಬರೆದು | • ಮಾಡುತ |
| • ತಿಂದು | • ನಡೆಯುತ್ತ |
| • ನೋಡುತ್ತ | • ಓಡಿ |



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ತದ್ಧಿತಾಂತನಾಮಕ್ಕೆ ಉದಾಹರಣೆ :

(ಎ) ಬಳೆಗಾರ (ಬಿ) ಸಿರಿತನ

(ಸಿ) ಚಂದ್ರನಂತೆ (ಡಿ) ಕಪ್ಪು

2) ಇದೊಂದು ಕೃದಂತನಾಮ ಪದ :

(ಎ) ಓಟ (ಬಿ) ಓಡುವ

(ಸಿ) ಮಾಡದ (ಡಿ) ತಿಂದು

3) ಈ ಕೆಳಗಿನ ಪದಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ :

(ಎ) ಬಡತನ (ಬಿ) ಮಡಿವಾಳ

(ಸಿ) ರಾಧೆಗಿಂತ (ಡಿ) ಬರೆಯುವ

4) ತದ್ಧಿತಾಂತ ನಾಮಪದ :

(ಎ) ವಾಚಾಳಿ (ಬಿ) ಪೆರ್ಮೆ

(ಸಿ) ಅಂಜಿಕೆ (ಡಿ) ತಿನ್ನುತ್ತ

5) ತದ್ಧಿತಾಂತ ಅವ್ಯಕ್ಕೆ ಉದಾಹರಣೆಯಾಗಿದೆ :

(ಎ) ಮಾಲೆಗಾರ್ತಿ (ಬಿ) ನೋಟ

(ಸಿ) ಶಾಲೆಯವರೆಗೆ (ಡಿ) ಜಾಣತನ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

6) ನೆನಪು : ಕೃದಂತಭಾವನಾಮ :: ಹಿರಿಮೆ : ______

7) ಸಿರಿತನ : ತದ್ಧಿತಾಂತ ಭಾವನಾಮ :: ಮಾಟ : ______

8) ನಡೆಯುತ್ತ : ಕೃದಂತಾವ್ಯಯ :: ಪಟ್ಟಣದವರೆಗೆ : ______________

9) ಓಡು : ಓಟ :: ನೆನೆ :_______________

10) ಬಳೆಗಾರ : ಬಳೆಗಾರ್ತಿ :: ಒಕ್ಕಲಿಗ :_____________

*************************************************************************************

## ಉತ್ತರಗಳು :

**1) (ಎ) ಬಳೆಗಾರ 2) (ಬಿ) ಓಡುವ 3) (ಎ) ಬಡತನ 4) (ಎ) ವಾಚಾಳಿ**

**5) (ಸಿ) ಶಾಲೆಯವರೆಗೆ 6) ತದ್ಧಿತಾಂತ ಭಾವನಾಮ 7) ಕೃದಂತ ಭಾವನಾಮ 8) ತದ್ಧಿತಾಂತಾವ್ಯಯ**

**9) ನೆನಪು 10) ಒಕ್ಕಲಗಿತ್ತಿ**



Scanned by CamScanner

# 6.ದ್ವಿರುಕ್ತಿಗಳು

- ✓ ಒಂದು ಪದವನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.ಒಂದು
- ✓ ಪದಭಾಗವನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.ದ್ವಿ–ಎಂದರೆ
- ✓ ಎರಡು ಉಕ್ತಿ–ಎಂದರೆ ಮಾತು ಒಂದು ಮಾತನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ

  ದ್ವಿರುಕ್ತಿ ಎನ್ನುತ್ತಾರೆ.

- ✓ ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕೆ ಒಂದು ಪದವನ್ನೋ, ಒಂದು ವಾಕ್ಯವನ್ನೋ ಎರಡೆರಡು ಬಾರಿ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.

## ದ್ವಿರುಕ್ತಿಗಳು

| | | | |
|---|---|---|---|
| ಹೌದು ಹೌದು | ಬೇಡಬೇಡ | ನಟ್ಟನಡುವೆ | ನಿಲ್ಲು ನಿಲ್ಲು |
| ನಡೆನಡೆ | ಬಟ್ಟಬಯಲು | ಹಣ್ಣುಹಂಪಲು | ಹೆಚ್ಚುಹೆಚ್ಚು |
| ಬಂದೆ ಬಂದೆ | ಸಾಕು ಸಾಕು | ತುದಿ ತುದಿ | ತುತ್ತತುದಿ |
| ದೊಡ್ಡ ದೊಡ್ಡ | ಹೌದ್ಹೌದು | ಕೊನೆಕೊನೆಗೆ | ಬೇಗಬೇಗ |
| ಹೆಚ್ಚು ಹೆಚ್ಚು | ಓಡುಓಡು | ತಿರುತಿರುಗಿ | ಮನೆಮನೆಗಳಲ್ಲಿ |
| ಮೊದಮೊದಲು | ಕೊತ್ತಕೊನೆಗೆ | ಈಗೀಗ | ಮೊತ್ತಮೊದಲು |
| ಮೆಲ್ಲಮೆಲ್ಲನೆ | ಒಬ್ಬೊಬ್ಬ | ಊರೂರು | ಯುಗ–ಯುಗಗಳ |
| ಹತ್ತಿರತ್ತಿರ | ನಡುನಡುವೆ | ಗಾವುದಗಾವುದ | ದುಂಡುದುಂಡಾದ |
| ಗರಿಗರಿ | ಓಡೋಡು | ಬಣ್ಣಬಣ್ಣಗಳ | ಸುಡುಸುಡು |
| ಒಳಗೊಳಗೆ | ಖಂಡಖಂಡಗಳ | ಇರುಳಿರುಳು | ಒಂದೊಂದು |
| ದಿನದಿನ | ನೋಡುನೋಡು | ಸಲಸಲಕ್ಕೂ | ಬನ್ನಿ ಬನ್ನಿ |

# 7.ಜೋಡುನುಡಿಗಳು

ಒಂದು ಪದದ ಜೊತೆ ಪ್ರಾಸಕ್ಕಾಗಿ ಕೆಲವೊಮ್ಮೆ ಮತ್ತೊಂದು ಪದ ಬಳಸುವುದುಂಟು. ಆ ಪದವನ್ನು ಜೋಡಿಪದ ಎನ್ನುವರು.

| | | |
|---|---|---|
| ಕರಿನರೆ | ಸೊಪ್ಪುಸದೆ | ಬಟ್ಟೆಬರೆ |
| ಬಿಳಿಹೊಳೆ | ಹಾಲು–ಗೀಲು | ಮಕ್ಕಳುಮರಿ |
| ಸತಿಪತಿ | ಮನೆಮಠ | ಹುಳುಹುಪ್ಪಡಿ |
| ಹಾಲ್ಜೇನು | | |



Scanned by CamScanner

## 8.ಅನುಕರಣಾವ್ಯಗಳು

ಅರ್ಥವಿಲ್ಲದ ಧ್ವನಿವಿಶೇಷಗಳನ್ನು ಅನುಕರಣಾವ್ಯಯಗಳು ಎನ್ನಲಾಗುತ್ತದೆ.

ಧ್ವನಿಯನ್ನು ಅನುಕರಣೆ ಮಾಡಿ ಹೇಳುವ ಶಬ್ಧಗಳು ಅನುಕರಣಾವ್ಯಯಗಳು

| | | |
|---|---|---|
| ಗುಜುಗುಜು | ಜುಳುಜುಳು | ಪಟಪಟ |
| ಸರಸರ | ಚಟಚಟ | ಫಳಫಳ |
| ಝುಣಝುಣ | ದಡದಡ | ಢಣಢಣ |
| ಘಮಘಮ | ಘುಳುಘುಳು | ಚುಮುಚುಮು |
| ಧಗಧಗ | ಚುರುಚುರು | ಲಕಲಕ |
| ಸುಯ್ಯನೆ | ರೊಯ್ಯನೆ | ದಡಬಡ |

## 9.ತತ್ಸಮ–ತದ್ಭವ

✓ ಸಂಸ್ಕೃತದಿಂದ ನೇರವಾಗಿ ಕನ್ನಡದಲ್ಲಿ ಬಳಸುವ ಶಬ್ದಗಳು ತತ್ಸಮ

✓ ಸಂಸ್ಕೃತದಿಂದ ಅಲ್ಪ–ಸ್ವಲ್ಪ ಬದಲಾವಣೆಯಾಗಿ ಕನ್ನಡದಲ್ಲಿ ಬಳಸುವ ಶಬ್ದಗಳು ತದ್ಭವ

| ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ |
|---|---|---|---|
| ವಿಜ್ಞಾನ – ಬಿನ್ನಾಣ | ಸುಧೆ – ಸೊದೆ | ವಂಶ – ಬಂಚ | ಶುನಕ – ಸೊಣಗ |
| ಮುಖಶಾಲೆ – ಮೊಗಸಾಲೆ | ತಟ – ತಡಿ | ಸ್ಥಾನ – ಠಾಣ | ಧರ್ಮ – ಧಮ್ಮ |
| ದಾತೃ – ದಾತಾರ | ವ್ಯಯ – ಬೀಯ | ಯಶ – ಜಶ | ಪಕ್ಷಿ – ಹಕ್ಕಿ |
| ವಿಜ್ಞಾಪನೆ – ಬಿನ್ನಹ | ವ್ಯಾಪಾರಿ – ಬೇಹಾರಿ | ಪಟ್ಟಣ – ಪತ್ತನ | ಬ್ರಮ್ಮ – ಬೊಮ್ಮ |
| ಸಾಮಂತ – ಸಾವಂತ | ಸಂದೇಹ – ಸಂದೆಯ | ಕಾರ್ಯ – ಕಜ್ಜ | ತಪಸ್ವಿ – ತವಸಿ |
| ಕೋಕಿಲಾ – ಕೋಗಿಲೆ | ಅಮೃತ – ಅಮರ್ದು | ಕಣಿ – ಗಣಿ | ಅಟವಿ – ಅಡವಿ |
| ದೀಪಿಕಾ – ದೀವಿಗೆ | ಕಾವ್ಯ – ಕಬ್ಬ | ಪುಣ್ಯ –ಹೂನ್ಯ | ಪ್ರಸಾದ – ಹಸಾದ |
| ವಂಧ್ಯಾ – ಬಂಜೆ | ಯಜ್ಞ – ಜನ್ನ | ಶಶಿ –ಸಸಿ | ಕವಿ – ಕಬ್ಬಿಗ |
| ವಿದ್ಯಾಧರ –ಬಿಜ್ಜೋಧರ | ದ್ಯೂತ – ಜೂಜು | ವೀರ – ಬೀರ | ಕುಠಾರ – ಕೊಡಲಿ |
| ಅರ್ಕ – ಎಕ್ಕ | ರಾಜ – ರಾಯ | ವೈಶಾಖ – ಬೇಸಗೆ | ವರ್ಷ – ವರುಷ |
| ಪಾದುಕಾ – ಹಾವುಗೆ | ದಿಶೆ – ದಿಶಾ | ದೃಷ್ಟಿ – ದಿಟ್ಟಿ | ಭಕ್ತ – ಬಕುತ |
| ಗೃಹ – ಗರ | ಶ್ರೀ – ಸಿರಿ | | |



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಈಗೀಗ –ಇದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ :

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

2) ಈ ಪದಗಳಲ್ಲಿ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ :

(ಎ) ಬೇಗಬೇಗ (ಬಿ) ಸರಸರ

(ಸಿ) ಸತಿಪತಿ (ಡಿ) ಹಾಲುಜೇನು

3) ಅನುಕರಣಾವ್ಯಕ್ಕೆ ಉದಾಹರಣೆ ಉದಾಹರಣೆ :

(ಎ) ಬಿಳಿಹೊಳೆ (ಬಿ) ದುಂಡುದುಂಡಾದ

(ಸಿ) ಸುಡುಸುಡು (ಡಿ) ಧಗಧಗ

4) ಜೋಡುನುಡಿಗೆ ಉದಾಹರಣೆ :

(ಎ) ಸತಿಪತಿ (ಬಿ) ಸರಸರ

(ಸಿ) ಊರೂರು (ಡಿ) ಧಗಧಗ

**5)** 'ಅಮೃತ' ಪದದ ತದ್ಭವ ರೂಪ :

(ಎ) ಜೇನು (ಬಿ) ಅಮರ್ದು

(ಸಿ) ಅಮಳ (ಡಿ) ಹಾಲು

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

6) ವಿಜ್ಞಾನ : ಭಿನ್ನಾಣ :: ವ್ಯಾಪಾರಿ : ________________

7) ವಂಶ : ಬಂಚ : : ಶುನಕ : _________________

8) ಕರಿನರೆ : ಜೋಡುನುಡಿ : : ಇರುಳಿರುಳು : ____________

9) ಹಾಲ್ಜೇನು : ಜೋಡುನುಡಿ :: ಗುಜುಗುಜು : ______________

10) ನಟ್ಟನಡುವೆ : ದ್ವಿರುಕ್ತಿ : : ಸೊಪ್ಪುಸದೆ : __________

*********************************************************************************************

**ಉತ್ತರಗಳು :**

**1) (ಬಿ) ದ್ವಿರುಕ್ತಿ 2) (ಎ) ಬೇಗಬೇಗ 3) (ಡಿ) ಧಗಧಗ 4) (ಎ) ಸತಿಪತಿ**

**5) (ಬಿ) ಅಮರ್ದು 6) ಬೇಹಾರಿ 7) ಸೊಣಗ 8) ದ್ವಿರುಕ್ತಿ**

**9) ಅನುಕರಣಾವ್ಯಯ 10) ಜೋಡುನುಡಿ**



Scanned by CamScanner

# 10.ಅನ್ಯದೇಶಿ ಪದಗಳು

| ಗ್ರೀಕ್ ಮತ್ತು ರೋಮನ್ | ಪರ್ಶಿಯನ್ (ಪಾರ್ಶಿ) | ಅರಬ್ಬಿ | ಪೋರ್ಚುಗೀಸ್ | ಉರ್ದು | ಹಿಂದುಸ್ಥಾನಿ | ಇಂಗ್ಲೀಷ್ |
|---|---|---|---|---|---|---|
| ದಮ್ಮಡಿ | ಅಬಕಾರಿ | ಅಮಾನತು | ಮೇಜು | ಕಿಮ್ಮತ್ತು | ಅರ್ಜಿ | ಬಸ್ಸು |
| ದಮಡಿ | ರಸ್ತೆ | ಅಸಲು | ತಂಬಾಕು | ತಾರೀಖು | ಕಛೇರಿ | ಕಾರು |
| ದಮ್ಮ | ದವಾಖಾನೆ | ಇನಾಮು | ಅನಾನಸು | ತಾಲೂಕು | ಕಾರ್ಖಾನೆ | ಕಾಲೇಜು |
| ದಿನಾರ | ಚೌಕಾಸಿ | ಕಾಯ್ದೆ | ಸಾಬೂನು | ಅಹವಾಲು | ಸಲಾಮು | ನೈಟು |
| ಗದ್ಯಾಣ | ಜಮೀನು | ಗಲೀಜು | ಆಸ್ಪತ್ರೆ | ಇಲಾಖೆ | ದರ್ಬಾರು | ಪೆನ್ನು |
| | ಅಜಮಾಹಿಸಿ | ತಕರಾರು | ಚೊಂಬು | ದರ್ಜೆ | ಕುರ್ಚಿ | ಸ್ಯಾನಿಟರಿ |
| | ಆಮದು | ತರಬೇತು | ಚಾ | ಬಂದೂಕು | ಕಾಗದ | ಸೋಪು |
| | ದಲ್ಲಾಳಿ | ನಕಲಿ | ಇಸ್ತ್ರಿ | ರುಜು | ಹುಕುಂ | ಡಿಪ್ಲೋಮಾ |
| | ಮಸಲತ್ತು | | ರಸೀದಿ | ಶುರು | | |
| | ದಿವಾನ | | | ಶಾಮೀಲು | | |
| | ಸರಕಾರ | | | ದಾಖಲೆ | | |
| | | | | ಜುಲ್ಮಾನೆ | | |

# 11.ಗ್ರಾಂಥಿಕ ರೂಪ

| | |
|---|---|
| ➢ ಹೀಂಗ | ✓ ಹೀಗೆ |
| ➢ ಕಳುವ್ಯಾರೆ | ✓ ಕಳುಹಿಸಿದ್ದಾರೆ |
| ➢ ಇಲ್ಲದ್ಹಂಗ | ✓ ಇಲ್ಲದಹಾಗೆ |
| ➢ ಇಸವಾಸ | ✓ ವಿಶ್ವಾಸ |
| ➢ ಸಕ್ಕಾರಿ | ✓ ಸಕ್ಕರೆ |



Scanned by CamScanner

# 12.ವಾಕ್ಯ ಪ್ರಕಾರಗಳು

**1) ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಸಾಮಾನ್ಯ ವಾಕ್ಯವೆಂದು ಕರೆಯುತ್ತಾರೆ.**

- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
- ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
- ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**2) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ**

- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು;ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು;ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು.

**3) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ಅಧೀನಗಳಾಗಿದ್ದರೆ ಅಂತ ವಾಕ್ಯವನ್ನು ಮಿಶ್ರವಾಕ್ಯ ಎನ್ನುತ್ತೇವೆ.**

- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯ ನವರು ನಿರ್ಧರಿಸಿದರಾದರೂ ಅವರ ನಿಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

**ಪ್ರಧಾನ ವಾಕ್ಯ :–**

- ಅವರು ಬಹುವಾಗಿ ಮರುಗಿದರು

**ಉಪವಾಕ್ಯಗಳು :–**

- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು.
- ಅವರ ನಿಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ.



Scanned by CamScanner

## 13.ಪದಗಳ ಅರ್ಥ

| ಪದ | ಅರ್ಥ | ಪದ | ಅರ್ಥ |
|---|---|---|---|
| ಪೈಕಿ | ➢ ಸಂಬಂಧಿಕ | ಅಬ್ಧಿ | ➢ ಸಮುದ್ರ |
| ಆರ್ತತೆ | ➢ ಬಯಕೆ | ಇಂಬು | ➢ ಅವಕಾಶ |
| ವಿಲಾತಿ | ➢ ವಿಲಾಯಿತಿ | ಅರ್ತಿ | ➢ ಪ್ರೀತಿ |
| ಮಸಲತ್ತು | ➢ ಪಿತೂರಿ | ಉರ್ವಿ | ➢ ನೆಲ |
| ಕುಮಕಿ | ➢ ಸಹಾಯಕ | ಕಿಂಕರ | ➢ ಸೇವಕ |
| ಕಾಪು | ➢ ರಕ್ಷಣೆ | ಕುಟಿಲ | ➢ ಮೋಸ |
| ಅಂದಣ | ➢ ಪಲ್ಲಕ್ಕಿ | ಚೋದ್ಯ | ➢ ಆಶ್ಚರ್ಯ |
| ಅನೃತ | ➢ ಸುಳ್ಳು | ತಡಿ | ➢ ತಟ |
| ತೃಷೆ | ➢ ಬಾಯಾರಿಕೆ | ದೃಗುಜಲ | ➢ ಕಣ್ಣೀರು |
| ದ್ರುಮ | ➢ ಮರ | ಕದಳಿ | ➢ ಬಾಳೆ |
| ಧೃತಿ | ➢ ಧೈರ್ಯ | ನಣ್ಪು | ➢ ನಂಟು |
| ಪೆರ್ಮೆ | ➢ ಹಿರಿಮೆ | ಬೆಸಕೈ | ➢ ಹೇಳು |
| ವಾಜಿ | ➢ ಕುದುರೆ | ಸೊದೆ | ➢ ಅಮೃತ |
| ಕಸರತ್ತು | ➢ ಚಮತ್ಕಾರ | ಜರ್ಬು | ➢ ಭರ್ಜರಿ |
| ಉಪಾಸನೆ | ➢ ಪೂಜೆ | | |

## 14.ವಿಭಕ್ತಿ ಪ್ರತ್ಯಯಗಳು

| ವಿಭಕ್ತಿ ಹೆಸರು | ಹೊಸಗನ್ನಡ ಪ್ರತ್ಯಯ | ಕಾರಕಾರ್ಥಗಳು | ಉದಾಹರಣೆ | ಹಳಗನ್ನಡ ಪ್ರತ್ಯಯ | ಉದಾಹರಣೆ |
|---|---|---|---|---|---|
| ಪ್ರಥಮ | ಉ | ಕರ್ತೃ | ರಾಮನು | ಮ್ | ರಾಮಮ್ |
| ದ್ವಿತೀಯ | ಅನ್ನು | ಕರ್ಮ | ರಾಮನನ್ನು | ಅಂ | ರಾಮನಂ |
| ತೃತೀಯ | ಇಂದ , ಯಿಂದ | ಕರಣ | ರಾಮನಿಂದ | ಇಂ,ಇಂದಂ,ಇಂದೆ | ರಾಮನಿಂ |
| ಚತುರ್ಥಿ | ಗೆ ,ಇಗೆ ,ಕ್ಕೆ | ಸಂಪ್ರದಾನ | ರಾಮನಿಗೆ | ಗೆ ,ಕೆ,ಕ್ಕೆ | ರಾಮನಿಗೆ |
| ಪಂಚಮಿ | ದೆಸೆಯಿಂದ | ಅಪದಾನ | ರಾಮನದೆಸೆಯಿಂದ | ಅತ್ತಣಿಂ ,ಅತ್ತಣಿಂದಂ | ರಾಮನತ್ತಣಿಂ |
| ಷಷ್ಠಿ | ಅ | ಸಂಬಂಧ | ರಾಮನ | ಅ | ರಾಮನ |
| ಸಪ್ತಮಿ | ಅಲ್ಲಿ | ಅಧಿಕರಣ | ರಾಮನಲ್ಲಿ | ಒಳ್ | ರಾಮನೊಳ್ |



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಪರ್ಶಿಯನ್ ಭಾಷೆಯ ಪದ :

(ಎ) ಕಾಗದ (ಬಿ) ಅಮಾನತು (ಸಿ) ಅನಾನಸು (ಡಿ) ದಿವಾನ

2) ಅಜಮಾಯಿಸಿ ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ?

(ಎ) ಪೋರ್ಚ್‌ಗೀಸ್ (ಬಿ) ಪರ್ಶಿಯನ್ (ಸಿ) ಅರಬ್ಬಿ (ಡಿ) ಗ್ರೀಕ್

3) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು :

(ಎ) ಸಾಮನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ನಿಗಧಿತ ವಾಕ್ಯ

4) ಕಳುವ್ಯಾರೆ ಪದದ ಗ್ರಾಂಥಿಕ ರೂಪ :

(ಎ) ಕಳವುಮಾಡಿದರು (ಬಿ) ಕಳುಹಿಸಿದ್ದಾರೆ (ಸಿ) ಕಳೆದುಹೋಗಿದೆ (ಡಿ) ಕಳೆದಿದ್ದಾರೆ

5) ತೃತೀಯಾ ವಿಭಕ್ತಿ ಕಾರಕಾರ್ಥ :

(ಎ) ಕರ್ತೃ (ಬಿ) ಸಂಪ್ರಧಾನ (ಸಿ) ಕರ್ಮ (ಡಿ) ಕರಣ

6) ರಾತ್ರಿಯೊಳ್ –ಪದದ ವಿಭಕ್ತಿ ಹೆಸರು :

(ಎ) ಪಂಚಮಿ (ಬಿ) ಸಪ್ತಮಿ (ಸಿ) ಚತುರ್ಥಿ (ಡಿ) ದ್ವಿತೀಯ

7) ವೀರೇಶ್ವರ ಪಾಠಕ್ ರನ್ನು ಬೆಂಗಳೂರಿಗೆ ವರ್ಗಾವಣೆಮಾಡಲಾಯಿತು– ಇದು

(ಎ) ಸಾಮನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ಸಂಬಂಧಿತ ವಾಕ್ಯ

8) ಅರ್ತಿ –ಪದದ ಅರ್ಥ :

(ಎ) ಅದಿವಿ (ಬಿ) ಪ್ರೀತಿ (ಸಿ) ಐತಿ (ಡಿ) ಆರತಿ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

9) ದಾಖಲೆ : ಉರ್ದು :: ಅನಾನಸು : ________________

10) ಇಲ್ಲದ್ದಂಗ : ಇಲ್ಲದಹಾಗೆ : : ಇಸವಾಸ : _________________

11) ಉಪಾಸನೆ : ಪೂಜೆ : : ವಾಜಿ : ____________

12) ವಿಲಾತಿ : ವಿಲಾಯಿತಿ : : ಆರ್ತತೆ : ______________

13) ಮನೆಯನ್ನು : ದ್ವಿತೀಯ : : ಮರದಲ್ಲಿ : __________

14) ಒಳ್ : ಸಪ್ತಮಿ : : ಅತ್ತಣಿಂ : _______________

15) ಪ್ರಥಮ : ಕರ್ತೃಕಾರಕ : : ಷಷ್ಠಿ : ______________

*************************************************************************************

**ಉತ್ತರಗಳು : 1) (ಡಿ) ದಿವಾನ 2)(ಬಿ) ಪರ್ಶಿಯನ್ 3) (ಸಿ) ಮಿಶ್ರವಾಕ್ಯ 4) (ಬಿ) ಕಳುಹಿಸಿದ್ದಾರೆ**

**5) (ಡಿ) ಕರಣ 6) (ಬಿ) ಸಪ್ತಮಿ 7) (ಎ) ಸಾಮನ್ಯವಾಕ್ಯ 8) (ಬಿ) ಪ್ರೀತಿ**

**9) ಪೋರ್ಚ್‌ಗೀಸ್ 10) ವಿಶ್ವಾಸ 11) ಕುದುರೆ, ಹಯ, 12) ಬಯಕೆ**

**13) ಸಪ್ತಮಿ 14) ಪಂಚಮಿ 15) ಸಂಬಂಧಕಾರಕ**



Scanned by CamScanner

# 15.ಲೇಖನ ಚಿಹ್ನೆಗಳು

**ಪೂರ್ಣ ವಿರಾಮ :– ( . )** ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ :–** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ :– ( , )** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

**ಉದಾ :–** ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಅರ್ಧವಿರಾಮ ಚಿಹ್ನೆ** :– ( ; ) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಚಿಹ್ನೆ ಅರ್ಧವಿರಾಮ ಚಿಹ್ನೆ –( ; )

ಉದಾಹರಣೆಗೆ :– ತಾವು ಕಡಿಮೆ ಮಾತನಾಡಿದ್ದೀರಿ ;ಹೆಚ್ಚು ಕೆಲಸ ಮಾಡಿದ್ದೀರಿ.

**ಭಾವಸೂಚಕ ಚಿಹ್ನೆ :–** ( ! ) ಹರ್ಷ,ಆಶ್ಚರ್ಯ,ಸಂತೋಷ,ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ಪದಗಳ ಮುಂದೆ ಬಳಸುವು ಚಿಹ್ನೆ ಭಾವಸೂಚಕ ಚಿಹ್ನೆ– ( ! )

ಉದಾಹರಣೆಗೆ :– ಅಯ್ಯೋ ! ಹೀಗಾಗ ಬಾರದಿತ್ತು !

ಅಬ್ಬಾ ! ಎಷ್ಟೊಂದು ಸುಂದರ !

**ಉದ್ಧರಣ ಚಿಹ್ನೆ :–** ( " ") ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ ಉದ್ಧರಣ ಚಿಹ್ನೆ – (" ")

ಉದಾಹರಣೆಗೆ :– (ವಿಶ್ವೇಶ್ವರಯ್ಯನವರು ಹೇಳಿದ ಮಾತನ್ನು ಬರೆಯುವಾಗ )

" ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಅಜನ್ಮಸಿದ್ಧ ಹಕ್ಕಾಗಬೇಕು"

**ವಾಕ್ಯ ವೇಷ್ಟನ ಚಿಹ್ನೆ :–** ( ' ' ) ಪಾರಿಭಾಷಿಕ ಪದಗಳನ್ನು ಬಳಸುವಾಗ ,ಅನ್ಯ ಭಾಷೆಯ ಪದಗಳನ್ನು ಬಳಸುವಾಗ ಉಪಯೋಗಿಸುವ ಚಿಹ್ನೆ ವಾಕ್ಯವೇಷ್ಟನ ಚಿಹ್ನೆ– ( ' ' )

ಉದಾಹರಣೆಗೆ :– ಕನ್ನಡ ಭಾಷೆಯಲ್ಲಿ ' ಇಂಗ್ಲಿಷ್ ' ಪದಗಳನ್ನು ಬಳಸಲಾಗುತ್ತದೆ.



Scanned by CamScanner

**ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ ವಿವರಣಾತ್ಮಕ ಚಿಹ್ನೆ – ( :– )

**ಉದಾಹರಣೆಗೆ :–**

ಸಮ್ಯಕ್ ದರ್ಶನ :– ಜೈನಮತದ ಬಗ್ಗೆ ಇರುವ ವಿಶ್ವಾಸ.

**ಪ್ರಶ್ನಾರ್ಥಕ :– (?)** ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾಹರಣೆಗೆ :–** ಶಬರಿ ಯಾರು ?

**ಆವರಣ ಚಿಹ್ನೆ :– ( )** ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾಹರಣೆಗೆ :–** ಅರಸುಗಳ(ರಾಜರ)ವಾಜಿ(ಕುದುರೆ) ಆಶ್ರಮವನ್ನು ಹೊಕ್ಕಿತು.

ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

## 16.ಅವ್ಯಯಗಳು

**ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು ಅವ್ಯಯಗಳು ಎಂದು ಕರೆಯಲಾಗಿದೆ.**

| ಸಾಮಾನ್ಯಾರ್ಥಕಾವ್ಯಯ | ಭಾವಸೂಚಕಾವ್ಯಯಗಳು | ಕ್ರಿಯಾರ್ಥಕಾವ್ಯಯಗಳು | ಸಂಬಂಧಾರ್ಥಕಾವ್ಯಯಗಳು | ಅವಧಾರಣಾರ್ಥಕಾವ್ಯಯ |
|---|---|---|---|---|
| ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳು | ಮನಸ್ಸಿನಲ್ಲಿ ಉಂಟಾಗುವ ಭಾವಗಳನ್ನು ವ್ಯಕ್ತಪಡಿಸುವಾಗ ಬಳಸುವ ಪದಗಳು (ಕೋಪ,ಭಯ) | ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳು | ಎರಡು ಪದ, ಪದಸಮುಚ್ಚಯ, ವಾಕ್ಯಗಳನ್ನು ಜೋಡಿಸುವಂತಹ ಪದಗಳು | ಒಂದು ನಿ ಶ್ಚಯಾರ್ಥದಲ್ಲಿರುವ ಅವ್ಯಯವನ್ನು('ಏ') ಅವಧಾರಣಾರ್ಥಕ ಅವ್ಯಯ ಎಂದು ಕರೆಯುತ್ತಾರೆ. |
| ಬೇಗನೆ, ಮೆಲ್ಲಗೆ, ಸೊಗಸಾಗಿ, ಚೆನ್ನಾಗಿ ಸುಮ್ಮನೆ, ತಟ್ಟನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ. | ಆಹಾ!<br>ಭಳಿರೆ!<br>ಅಯ್ಯೋ!<br>ಓಹೋ!<br>ಹೋ!<br>ಅಃ! ಆಃ<br>ಓ | ಅಹುದು<br>ಸಾಕು<br>ಅಲ್ಲ<br>ಹೌದು<br>ಬೇಡ<br>ಉಂಟು | ಮತ್ತು<br>ಅಥವಾ<br>ಆದ್ದರಿಂದ<br>ಊ<br>ಉಂ<br>ಅಲ್ಲದೆ | ಅವನೇ<br>ಅದುವೇ<br>ನೀನೇ<br>ಅವಳೇ<br>ಅವರೇ |



Scanned by CamScanner

# 17.ನಾಮಪದಗಳು

| ರೂಢನಾಮಗಳು | ಅಂಕಿತನಾಮಗಳು | ಅನ್ವರ್ಥನಾಮಗಳು | ಸರ್ವನಾಮಗಳು | ಆತ್ಮಾರ್ಥಕ ಸರ್ವನಾಮಗಳು | ಪ್ರಶ್ನಾರ್ಥಕ ಸರ್ವನಾಮ |
|---|---|---|---|---|---|
| ರೂಢಿಯಿಂದ ಬಂದ ಪದಗಳು | ನಿರ್ದಿಷ್ಟವಾಗಿ ಗುರುತಿಸಲು ಇಟ್ಟ ಹೆಸರುಗಳು | ಅರ್ಥಕ್ಕನುಗುಣವಾಗಿ ಇಟ್ಟ ಹೆಸರುಗಳು | ನಾಮಪದದ ಬದಲಿಗೆ ಬಳಸುವ ವಾಚಕಗಳು | ತಾನು,ತಾವು –ಈ ರೂಪದ ನಾಮಗಳು | ಪ್ರಶ್ನಾರ್ಥಕ ರೂಪದ ಸರ್ವನಾಮಗಳು |
| ನದಿ | ಸಹದೇವ | ವ್ಯಾಪಾರಿ | ಅವನು ,ಇವನು | ತಾನು | ಯಾರು ? |
| ಪರ್ವತ | ಧರ್ಮರಾಯ | ವಿದ್ವಾಂಸ | ಅವಳು ,ಇವಳು | ತಾವು | ಏನು ? |
| ಊರು | ರಾಹುಲ | ವಿಜ್ಞಾನಿ | ಅದು , ಇದು | ತನ್ನ | ಯಾವುದು ? |
| ದೇಶ | ಕಮಲಾಕ್ಷ | ಪೂಜಾರಿ | ಅವರು, ಇವರು | ತಮ್ಮ | ಯಾರಿಗೆ ? |
| ಮನುಷ್ಯ | ರಾಮ | ಕುರುಡ | ಅವರು, ಇವರು | ತಮಗೆ | ಯಾವು ? |
| ವಿದ್ಯಾರ್ಥಿ | ಶಬರಿ | ಏಳವ | ಅವು , ಇವು | ತಮ್ಮಲ್ಲಿ | ಎಲ್ಲಿ ? |

| ಗುಣವಾಚಕ | ಭಾವನಾಮ | ಸಂಖ್ಯೇಯವಾಚಕ | ದಿಗ್ವಾಚಕ |
|---|---|---|---|
| ವಸ್ತುವ್ಯಕ್ತಿಯ ಗುಣ,ರೀತಿ, ಸ್ವಭಾವಗಳನ್ನು ತಿಳಿಸುವ ವಾಚಕಗಳು | ವಸ್ತು ಮತ್ತು ಕ್ರಿಯೆಯ ಭಾವಗಳನ್ನು ತಿಳಿಸುವ ಪದಗಳು | ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳು | ದಿಕ್ಕುಗಳನ್ನು ಸೂಚಿಸುವ ಪದಗಳು |
| ಒಳ್ಳೆಯ | ಕೆಂಪು | ಹನ್ನೆರಡನೆಯ | ಪೂರ್ವ |
| ಕೆಟ್ಟ | ಹಿರಿಮೆ | ಆರನೆಯ | ಪಶ್ಚಿಮ |
| ದೊಡ್ಡದು | ನೋಟ | ಎಂಬತ್ತನೆಯ | ಉತ್ತರ |
| ಹಳತು | ಮಾಟ | ಮೂವರು | ದಕ್ಷಿಣ |
| ಸಣ್ಣ | ಆಟ | ಐವರು | ಈಶಾನ್ಯ |
| ಚಿಕ್ಕ | ಬಿಳುಪು | ಇಬ್ಬರು | ವಾಯುವ್ಯ |



Scanned by CamScanner

# 18.ಕ್ರಿಯಾಪದ

ಕ್ರಿಯಾಪದದ ಮೂಲ ರೂಪವನ್ನು **'ಧಾತು'** ಎಂದು ಕರೆಯಲಾಗಿದೆ. ಇವುಗಳಲ್ಲಿ **'ಸಕರ್ಮಕ'** ಮತ್ತು **'ಅಕರ್ಮಕ'** ಧಾತುಗಳೆಂದು ಎರಡು ವಿಧಗಳಿವೆ.

| ಸಕರ್ಮಕ | ಅಕರ್ಮಕ |
|---|---|
| **ಕರ್ಮಪದ ಬಯಸುವ ಧಾತು** | **ಕರ್ಮಪದವನ್ನು ಹೊಂದಿರದ ಧಾತು** |
| ಕೊಡು, ಬಿಡು, ಉಣ್ಣು, ಉಜ್ಜು, ತಿದ್ದು, ಮುಚ್ಚು | ಮಲಗು, ಓಡು, ಬದುಕು, ಹೋಗು, ನಾಚು |

| ಕರ್ತರಿಪ್ರಯೋಗ | ಕರ್ಮಣಿಪ್ರಯೋಗ |
|---|---|
| ಧಾತುಗಳಿಗೆ ಲಿಂಗವಾಚಕ ಮತ್ತು ವಚನವಾಚಕಗಳು ಸೇರಿ ಒಂದು ಪೂರ್ಣವಾಕ್ಯವಾದಾಗ ಅದು **'ಕರ್ತರಿ ಪ್ರಯೋಗದ'** ವಾಕ್ಯವೆನಿಸುತ್ತದೆ. | ಸಕರ್ಮಕ ಧಾತುಗಳ ಮೇಲೆ **'ಅಲ್ಪಡು'** ಪ್ರತ್ಯಯ ಸೇರಿ ಕಾಲಸೂಚಕ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ **'ಕರ್ಮಣಿ ಪ್ರಯೋಗದ'** ವಾಕ್ಯವಾಗುತ್ತದೆ. |
| **ಉದಾಹರಣೆ :** ಭೀಮನು ಅನ್ನವನ್ನು ಉಂಡನು | **ಉದಾಹರಣೆ :** ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು. |

## ಕ್ರಿಯಾಪದಗಳ ವಿಧಗಳು

| ವಿಧ್ಯರ್ಥಕ | ನಿಷೇಧಾರ್ಥಕ | ಸಂಭಾವನಾರ್ಥಕ |
|---|---|---|
| ಆಶೀರ್ವಾದ , ಆಜ್ಞೆ , ಆರೈಕೆ ,ಅಪ್ಪಣೆ ಸೂಚಿಸುತ್ತವೆ. | ಕ್ರಿಯೆ ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂದು ಸೂಚಿಸುತ್ತವೆ. | ಕ್ರಿಯೆ ನಡೆಯುವಲ್ಲಿ ಸಂಶಯ,ಊಯೆ ಸೂಚಿಸುತ್ತವೆ. |
| ಮಾಡಲಿ | ಮಾಡನು | ಮಾಡಿಯಾನು |
| ತಿನ್ನಲಿ | ತಿನ್ನಳು | ತಿಂದಾಳು |
| ಓದಲಿ | ಓದರು | ಓದಿಯಾರು |
| ನೋಡಲಿ | ನೋಡನು | ನೋಡಿಯಾನು |

## ಕಾಲಗಳು

| ಭೂತಕಾಲ (ದ ,ದಪ) | ವರ್ತಮಾನ ಕಾಲ (ಉತ್ತ) | ಭವಿಷ್ಯತ್ ಕಾಲ (ವ) |
|---|---|---|
| ಹಿಂದೆ ನಡೆದಿದ್ದು | ಈಗ ನಡೆಯುತ್ತಿರುವುದು | ಮುಂದೆ ನಡೆಯುವುದು |
| ತಿಂದೆನು | ತಿನ್ನುತ್ತೇನೆ | ತಿನ್ನುವೆನು |
| ತಿಂದೆ | ತಿನ್ನುತ್ತಿ | ತಿನ್ನುವೆ |
| ತಿಂದನು | ತಿನ್ನುತ್ತಾನೆ | ತಿನ್ನುವನು |



Scanned by CamScanner

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ:
(ಎ) ಅಲ್ಪವಿರಾಮ (ಬಿ) ವಾಕ್ಯವೇಷ್ಟನ (ಸಿ) ಉದ್ಧರಣ (ಡಿ) ಪ್ರಶ್ನಾರ್ಥಕ

2) ಅಯ್ಯೋ ! ಹೀಗಾಗ ಬಾರದಿತ್ತು ! ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ :
(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಆವರಣ (ಡಿ) ಉದ್ಧರಣ

3) ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ :
(ಎ) ಚೆನ್ನಾಗಿ (ಬಿ) ಸಾಕು (ಸಿ) ಮತ್ತು (ಡಿ) ಅಯ್ಯೋ

4) ಆತ್ಮಾರ್ಥಕ ಸರ್ವನಾಮ ಪದ :
(ಎ) ತಾವು (ಬಿ) ಅವರು (ಸಿ) ಆದ್ದರಿಂದ (ಡಿ) ಯಾರು ?

5) ಅನ್ವರ್ಥನಾಮ ಪದಕ್ಕೆ ಉದಾಹರಣೆ :
(ಎ) ಮನುಷ್ಯ (ಬಿ) ವ್ಯಾಪಾರಿ (ಸಿ) ಸಹದೇವ (ಡಿ) ತಮಗೆ

6) ಕ್ರಿಯಾಪದದ ಮೂಲ ರೂಪ:
(ಎ) ಕೃದಂತ (ಬಿ) ವಿಭಕ್ತಿ (ಸಿ) ನಾಮಪ್ರಕೃತಿ (ಡಿ) **ಧಾತು**

7) ನಿಷೇಧಾರ್ಥಕ ರೂಪದ ಕ್ರಿಯಾಪದ :
(ಎ) ಓದರು (ಬಿ) ಓದಲಿ (ಸಿ) ಓದಿಯಾರು (ಡಿ) ಓದುವವನು

8) ಕೆಳಗಿನವುಗಳಲ್ಲಿ ಸಕರ್ಮಕ ಧಾತು :
(ಎ) ಮಲಗು (ಬಿ) ಬದುಕು (ಸಿ) ಓಡು (ಡಿ) ಕೊಡು

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

9) ಚೆನ್ನಾಗಿ : ಸಾಮಾನ್ಯಾವ್ಯಯ : : ಸಾಕು : ________________

10) ಪರ್ವತ : ರೂಢನಾಮ : : ವಿಜ್ಞಾನಿ : _________________

11) ಕಮಲಾಕ್ಷ : ಅಂಕಿತನಾಮ : : ತಾನು : ____________

12) ತಿನ್ನಲಿ : ವಿಧ್ಯರ್ಥಕ : : ಮಾಡನು : ______________

13) ತಿನ್ನುತ್ತಾನೆ : ವರ್ತಮಾನಕಾಲ : : ತಿನ್ನವುನು : __________

14) ದೊಡ್ಡದು : ಗುಣವಾಚಕ : : ನೋಟ : _______________

15) ಬೇಡ : ಕ್ರಿಯಾರ್ಥಕಾವ್ಯಯ : : ಆದ್ದರಿಂದ : ______________

*******************************************************************************************

**ಉತ್ತರಗಳು : 1) (ಸಿ) ಉದ್ಧರಣ 2) (ಎ) ಭಾವಸೂಚಕ 3) (ಬಿ) ಸಾಕು 4) (ಎ) ತಾವು**

**5) (ಬಿ) ವ್ಯಾಪಾರಿ 6) (ಡಿ) ಧಾತು 7) (ಎ) ಓದರು 8) (ಡಿ) ಕೊಡು**

**9) ಕ್ರಿಯಾರ್ಥಕಾವ್ಯಯ 10) ಅನ್ವರ್ಥನಾಮ 11) ಆತ್ಮಾರ್ಥಕ ಸರ್ವನಾಮ 12) ನಿಷೇಧಾರ್ಥಕ**

**13) ಭವಿಷ್ಯತ್ ಕಾಲ 14) ಭಾವನಾಮ 15) ಸಂಬಂಧಾರಕಾರ್ಥಾವ್ಯಯ**



Scanned by CamScanner

# 19.ಛಂದಸ್ಸು

**ಪದ್ಯರಚನಾ ನಿಯಮವನ್ನು ತಿಳಿಯಪಡಿಸುವ ಶಾಸ್ತ್ರ ಛಂದಸ್ಸು.**

**ಪ್ರಾಸ :** ಪದ್ಯದ ಪ್ರತಿ ಸಾಲಿನ ಆದಿ,ಮಧ್ಯ,ಅಂತ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರಗಳು ನಿಯತವಾಗಿ ಬರುವುದು 'ಪ್ರಾಸ.'

**ಯತಿ :** ಕಾವ್ಯವನ್ನು ಓದುವಾಗ ಉಸಿರು ತೆಗೆದು ಕೊಳ್ಳುವ ಸಲುವಾಗಿ ನಿಲ್ಲಿಸುವ ಸ್ಥಳ '**ಯತಿ**'

ಗಣಗಳು : ಗಣ ಎಂದರೆ '**ಗುಂಪು**' ಅಥವಾ '**ಸಮೂಹ**' ಎಂದರ್ಥ. ಛಂದಶ್ಶಾಸ್ತ್ರದಲ್ಲಿ '**ಗಣ**' ಎಂದರೆ ಪದ್ಯದ ಪ್ರತಿ ಸಾಲಿನಲ್ಲೂ ವಿಭಾಗಿಸಲ್ಪಡುವ **ಮಾತ್ರೆ** ಅಥವಾ **ಅಕ್ಷರ** ಅಥವಾ **ಅಂಶಗಳ** ಗುಂಪು ಎಂದರ್ಥ.

- ♣ ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣ **ಮಾತ್ರಾಗಣ.**
- ♣ ಅಕ್ಷರಗಳ ಲೆಕ್ಕಾಚಾರಗಳೊಂದಿಗೆ ವಿಭಾಗಿಸಲ್ಪಡುವ ಗಣ **ಅಕ್ಷರಗಣ.**
- ♣ ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು **ಅಂಶಗಣ.**

**ಅಕ್ಷರಗಣ**

ಮೂರು ಮೂರು ಅಕ್ಷರಗಳಿಗೆ ಒಂದರಂತೆ ಗಣ ವಿಭಾಗ ಮಾಡುವ ಕ್ರಮವೇ ಅಕ್ಷರಗಣ.
ಅಕ್ಷರಗಣಗಳಲ್ಲಿ ಎಂಟು ವಿಧದ ಗಣಗಳಿವೆ.

**ಯಮಾತಾರಾಜಭಾನಸಲಗಂ**

| ಗಣಗಳು | ಮಾತ್ರಾವಿನ್ಯಾಸ | ಗಣಗಳು | ಮಾತ್ರಾವಿನ್ಯಾಸ |
|---|---|---|---|
| 1) ಯಗಣ | U – – | 5) ಜಗಣ | U – U |
| 2) ಮಗಣ | – – – | 6) ಭಗಣ | – U U |
| 3) ತಗಣ | – – U | 7) ನಗಣ | U U U |
| 4) ರಗಣ | – U – | 8) ಸಗಣ | U U – |

ಗುರು ಲಘು ಮೂರಿರೆ ಮ – ನ – ಗಣ ।
ಗುರು ಲಘು ಮೊದಲಿರೆ ಭ – ಯ – ಗಣಮೆಂಬರ್ ॥
ಗುರು ಲಘು ನಡುವಿರೆ ಜ – ರ – ಗಣ ।
ಗುರು ಲಘು ಕೊನೆಯಿರೆ ಸ – ತ – ಗಣ ಮಕ್ಕುಂ ॥



Scanned by CamScanner

## ಮಾತ್ರಾಗಣ

- ಒಂದು ಅಕ್ಷರವನ್ನು ಉಚ್ಚರಿಸಲು ಬೇಕಾದ ಕಾಲವನ್ನು **'ಮಾತ್ರೆ '**ಎಂದು **ಕರೆಯಲಾಗುತ್ತದೆ.**
- ಮಾತ್ರೆಗಳ ಆಧಾರದಿಂದ **'ಗಣ'** ವಿಭಾಗ ಮಾಡಿದರೆ ಅದನ್ನು **'ಮಾತ್ರಾಗಣ'**
- **ಮೂರು, ನಾಲ್ಕು , ಐದು** ಮಾತ್ರೆಗಳ ಗಣಗಳನ್ನು ಮಾಡಲಾಗುವುದು.
- ಮಾತ್ರೆಗಳಲ್ಲಿ ಎರಡು ವಿಧಗಳಿವೆ. ಅವುಗಳು: **1) ಗುರು 2) ಲಘು**

→ಒಂದುಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರ **'ಲಘು'** **ಚಿಹ್ನೆ** 'U'

→ಎರಡು ಅಥವಾ ಎರಡಕ್ಕಿಂತ ಹೆಚ್ಚುಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರವನ್ನು **'ಗುರು'** **ಚಿಹ್ನೆ** '–'.

### ಪ್ರಸ್ತಾರಹಾಕುವುದು(ಲಘು–ಗುರು ಹಾಕುವುದು)

- ✓ ಹ್ರಸ್ವಸ್ವರಗಳು ಮತ್ತು ಹ್ರಸ್ವಸ್ವರಸಹಿತ ವ್ಯಂಜನಾಕ್ಷರಗಳು ಲಘು ಆಗುತ್ತವೆ.( U ) * (ಶಿಥಿಲದಿತ್ವ)
- ✓ ದೀರ್ಘಸ್ವರಗಳು ಮತ್ತು ದೀರ್ಘಸ್ವರಸಹಿತ ವ್ಯಂಜನಾಕ್ಷರಗಳು ಗುರು (–) ಆಗುತ್ತವೆ.
- ✓ ಒತ್ತಕ್ಷರದ ಹಿಂದಿನ ಅಕ್ಷರ ಅಕ್ಷರ ಗುರು (–) ಆಗುತ್ತವೆ.
- ✓ ಅನುಸ್ವಾರ ಅಥವಾ ವಿಸರ್ಗಗಳಿಂದ ಕೂಡಿರುವ ಅಕ್ಷರ ಗುರು (–) ಆಗುತ್ತವೆ.
- ✓ ವ್ಯಂಜನಾಕ್ಷರದ ಹಿಂದಿನ ಅಕ್ಷರ ಗುರು (–) ಆಗುತ್ತವೆ.
- ✓ ಷಟ್ಪದಿಯ ಮೂರು ಮತ್ತು ಆರನೆಯ ಕೊನೆ ಅಕ್ಷರ ಲಘು ಇದ್ದರೂ ಗುರು (–) ಆಗುತ್ತವೆ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

**ಅಂಕ ವಿತರಣೆ**
- ಪ್ರಸ್ತಾರ 1 ಅಂಕ
- ಗಣ ವಿಭಾಗ 1 ಅಂಕ
- ಛಂದಸ್ಸಿನ ಹೆಸರು 1 ಅಂಕ
- ಒಟ್ಟು 3 ಅಂಕಗಳು

**(2016 ಜೂನ್)**

### ಕಂದಪದ್ಯ

**ಲಕ್ಷಣ:**

- ಇದು ನಾಲ್ಕು ಸಾಲಿನ ಪದ್ಯ – ನಾಲ್ಕು ಮಾತ್ರೆಗೆ ಒಂದೊಂದು ಗಣ ವಿಂಗಡಿಸಬೇಕು.
- ಒಂದು ಮತ್ತು ಮೂರನೆಯ ಪಾದಗಳು ಸಮಾನಾಗಿದ್ದು ,ನಾಲ್ಕು ಮಾತ್ರೆಗಳ ಮೂರು ಮೂರು ಗಣಗಳು ಬರುತ್ತವೆ.
- ಎರಡು ಮತ್ತು ನಾಲ್ಕನೆಯ ಪಾದಗಳು ಸಮಾನವಾಗಿದ್ದು ನಾಲ್ಕು ಮಾತ್ರೆಗಳ ಐದೈದು ಗಣಗಳು ಬರುತ್ತವೆ.
- ಛಂದಸ್ಸು ಗುರುತಿಸಲು ಎರಡು ಸಾಲುಗಳನ್ನು ನೀಡಲಾಗುತ್ತದೆ.

ಉದಾಹರಣೆ :

| | | | | |
|---|---|---|---|---|
| UUUU | U U – | UU – | | |
| ಅತಿಕುಟಿ | ಲ ಮನಂ | ಧನಲು | | |
| UU – | – – | U–U | UU– | UU– |
| ಬ್ಧತೆಯಿಂ | ದಂದು | ಷ್ಟಬುದ್ಧಿ | ನುಡಿದ ಂ | ಪುಸಿಯಂ |



Scanned by CamScanner

| | | | |
|---|---|---|---|
| 4 | 4 | 4 | 12 |

| | | | | | |
|---|---|---|---|---|---|
| 4 | 4 | 4 | 4 | 4 | 20 |

ಛಂದಸ್ಸು – ಕಂದ ಪದ್ಯ

4 4 4 =12

| | | | |
|---|---|---|---|
| – – | U – U | U U UU | 12 |
| ನೀನು | ಕ್ಕೊಡೆಲ್ಲ | ರೊಳರೆಮ | |

4 4 4 4 4 =20

| | | | | | |
|---|---|---|---|---|---|
| – U U | – U U | U – U | – U U | U U – | 20 |
| ಗೇನುಮ | ಳಲ್ಮನ | ದೊಳಿಲ್ಲ | ದೆಂತೆನೆ | ಮಗನೇ | |

ಛಂದಸ್ಸು– ಕಂದ ಪದ್ಯ

4 4 4 = 12

| | | |
|---|---|---|
| – U U | – U U | U UUU |
| ಭಾನುವೆ | ಸಾಲದೆ | ಪಗಲೆನಿ |

4 4 4 4 4 =12

| | | | | |
|---|---|---|---|---|
| – – | – U U | U U UU | – – | U U – |
| ತಾನುಂ | ದೀವಿಗೆ | ಗಳುರಿದೊ | ಡೇಂ ನಂ | ದಿದೊಡೇಂ |

ಛಂದಸ್ಸು– ಕಂದ ಪದ್ಯ

↓ ಅಭ್ಯಾಸಕ್ಕಾಗಿ............

ಮತಿಗೆಟ್ಟು ತಸ್ಕರಸ್ತಾ

ನೃತಂ ಬಲಂ ಎನಿಪ ವಾಕ್ಯವಂ ನೆನೆಯುತ್ತುಂ



Scanned by CamScanner

# ಷಟ್ಪದಿ

**ಸಾಮಾನ್ಯ ಲಕ್ಷಣಗಳು**

- ∇ ಆರು ಸಾಲುಗಳಿರುತ್ತವೆ.
- ∇ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಒಂದಕ್ಕೊಂದು ಸಮಾನವಾಗಿರುತ್ತವೆ. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿರುತ್ತವೆ.

## ಷಟ್ಪದಿ ವಿಧಗಳು

**ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ** ಮತ್ತು **ವಾರ್ಧಕ**

## ಭಾಮಿನಿ ಷಟ್ಪದಿ

**ಲಕ್ಷಣ :**

- ϒ – ಆರು ಸಾಲುಗಳಿರುತ್ತವೆ.
- ϒ – ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಸಮಾನವಾಗಿದ್ದು ಪ್ರತಿಪಾದದಲ್ಲೂ ಮೂರು ಮಾತ್ರೆಯ ಮುಂದೆ ನಾಲ್ಕು ಮಾತ್ರೆಗಳು ಬರುವ ಹಾಗೆ (3 । 4 । 3 । 4 ) ತಲಾ ಎರಡೆರಡು ಗಣಗಳು ಗಣಗಳಿರುತ್ತವೆ.
- ϒ – ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮನಾಗಿದ್ದು ಪ್ರತಿಪಾದದಲ್ಲೂ ಮೂರು ಮಾತ್ರೆಯ ಮುಂದೆ ನಾಲ್ಕು ಮಾತ್ರೆಗಳು ಬರುವ ಹಾಗೆ (3 । 4 । 3 । 4 । 3 । 4 ) ತಲಾ ಮೂರು–ಮೂರು ಗಣಗಳಿರುತ್ತವೆ ಮತ್ತು ಕೊನೆಯಲ್ಲಿ ಒಂದು ಗುರು ಇರುತ್ತದೆ.

*** ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಮೂರು ಸಾಲುಗಳನ್ನು ನೀಡಲಾಗುತ್ತದೆ.**
*** ಕುಮಾರವ್ಯಾಸನ ಕೌರವೇಂದ್ರನ ಕೊಂದೆ ನೀನು ಪದ್ಯಗಳ ಉದಾಹರಣೆ ಕೊಟ್ಟಿದ್ದರೆ ಅದು ಭಾಮಿನಿ ಷಟ್ಪದಿ**

**ಉದಾಹರಣೆ :**

(2016 ಮಾರ್ಚ್)

| 3 | 4 | 3 | 4 | =14 |
|---|---|---|---|---|
| – U | – – | –U | – – | |
| ಏನು | ಹೇಳ್ವೆ | ಕರ್ಣ | ಚಿತ್ತ | |

| 3 | 4 | 3 | 4 | =14 |
|---|---|---|---|---|
| – U | – U U | UUU | – – | |
| ಗ್ಲಾನಿ | ಯಾವುದು | ಮನಕೆ | ಕುಂತೀ | |

| 3 | 4 | 3 | 4 | 3 | 4 | 1ಗುರು | =21+ 1ಗುರು |
|---|---|---|---|---|---|---|---|
| – U | UU UU | –U | – U U | – U | – UU | – | |
| ಸೂನು | ಗಳ ಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ | |

ಛಂದಸ್ಸು– ಭಾಮಿನಿ ಷಟ್ಪದಿ



Scanned by CamScanner

| 3 | 4 | 3 | 4 | =14 |
|---|---|---|---|---|

| UUU | – UU | – U | – UU |
|---|---|---|---|
| ಇನತ | ನೂಜನ | ಕೂಡೆ | ಮೈದುನ |

| 3 | 4 | 3 | 4 | =14 |
|---|---|---|---|---|

| UUU | UUUU | UUU | UUUU |
|---|---|---|---|
| ತನದ | ಸರಸವ | ನೆಸಗಿ | ರಥದೊಳು |

| 3 | 4 | 3 | 4 | 3 | 4 | 1ಗುರು | =21+ 1ಗುರು |
|---|---|---|---|---|---|---|---|

| UUU | UU UU | UUU | – UU | UUU | – UU | – |
|---|---|---|---|---|---|---|
| ಧನುಜ | ರಿಪು ಬರ | ಸೆಳೆದು | ಕುಳ್ಳಿರಿ | ಸಿದನು | ಪೀಠದ | ಲಿ |

**ಛಂದಸ್ಸು– ಭಾಮಿನಿ ಷಟ್ಪದಿ**

↓ **ಅಭ್ಯಾಸಕ್ಕಾಗಿ**

ಮಾರಿಗೌತಣವಾಯ್ತು ನಾಳಿನ

ಭಾರತವು ಚತುರಂಗ ಬಲದಲಿ

ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು

ಭೇದವಿಲ್ಲೆಲೆ ಕರ್ಣ ನಿಮ್ಮೊಳು

ಯಾದವರು ಕೌರವರೊಳಗೆ ಸಂ

ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ



Scanned by CamScanner

# ವಾರ್ಧಕ ಷಟ್ಪದಿ

ಲಕ್ಷಣ :

- ಆರು ಸಾಲುಗಳಿರುತ್ತವೆ
- ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾಸಂಖ್ಯೆಯಲ್ಲಿ ಸಮಾನವಾಗಿದ್ದು ಐದು ಮಾತ್ರೆಗಳ ನಾಲ್ಕು ಗಣಗಳು ಪ್ರತಿಪಾದದಲ್ಲೂ ಇರುತ್ತವೆ.
- ಮೂರು ಮತ್ತು ಆರನೆಯ ಪಾದಗಳು ಸಮಾನವಾಗಿದ್ದು ಐದು ಮಾತ್ರೆಗಳ ಆರಾರು ಗಣಗಳು ಪ್ರತಿಪಾದದಲ್ಲೂ ಇದ್ದು ಕೊನೆಯಲ್ಲಿ ಒಂದೊಂದು ಗುರು ಇರುತ್ತದೆ.

*** ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಮೂರು ಸಾಲುಗಳನ್ನು ನೀಡಲಾಗುತ್ತದೆ.**

*** ಲಕ್ಷ್ಮೀಶನ ವೀರಲವ ಪದ್ಯಗಳ ಉದಾಹರಣೆ ಕೊಟ್ಟಿದ್ದರೆ ಅದು ವಾರ್ಧಕ ಷಟ್ಪದಿ**

5 5 5 5 =20

| 5 | 5 | 5 | 5 |
|---|---|---|---|
| – U – | – UU | UUU UU | – – U |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ |

5 5 5 5 =20

| 5 | 5 | 5 | 5 |
|---|---|---|---|
| – U – | – U – | UU – U | UUU U U |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು |

5 5 5 5 5 5 1ಗುರು =30+1ಗುರು

| 5 | 5 | 5 | 5 | 5 | 5 | 1ಗುರು |
|---|---|---|---|---|---|---|
| – U UU | – U – | – U – | UUU – | – U – | UU U – | – |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನ ವನೋ | ದಿ |

**ಛಂದಸ್ಸು – ವಾರ್ಧಕ ಷಟ್ಪದಿ**

**ಅಭ್ಯಾಸಕ್ಕಾಗಿ**

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ

ತೊತ್ತಳದುಳಿದುದು ವಾಲ್ಮೀಕಿಮುನಿನಾಥನೇ

ಪೊತ್ತುಮಾರ್ಯೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ



Scanned by CamScanner

# ವೃತ್ತಗಳು

ಅಕ್ಷರಗಣಗಳ ಶಾಸ್ತ್ರಕ್ಕನುಗುಣವಾಗಿ ರಚಿಸಲ್ಪಟ್ಟ ಪದ್ಯಗಳನ್ನು **ವೃತ್ತಗಳು.**

ಆರು ಖ್ಯಾತ ಕರ್ನಾಟಕ ವೃತ್ತಗಳಿವೆ.

| ಖ್ಯಾತ ಕರ್ನಾಟಕ ವೃತ್ತಗಳು | | |
|---|---|---|
| 1) **ಉತ್ಪಲ ಮಾಲಾ ವೃತ್ತ** | 3) ಸ್ರಗ್ಧರಾ ವೃತ್ತ | 5) ಶಾರ್ದೂಲ ವಿಕ್ರೀಡಿತ ವೃತ್ತ |
| 2) **ಚಂಪಕ ಮಾಲಾ ವೃತ್ತ** | 4) ಮಹಾಸ್ರಗ್ಧರಾ ವೃತ್ತ | 6) **ಮತ್ತೇಭ ವಿಕ್ರೀಡಿತ ವೃತ್ತ** |

**ಆರು ವೃತ್ತಗಳನ್ನು ಗುರುತಿಸುವ ಪದ್ಯ**

**ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ**
**ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದ್ವಮಾ**
**ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ**
**ಹರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾಱುಂ ಖ್ಯಾತಕರ್ಣಾಟಕಂ**

**ವೃತ್ತಗಳ ಸಾಮಾನ್ಯ ಲಕ್ಷಣಗಳು :**

- ನಾಲ್ಕು ಪಾದಗಳಿರುತ್ತವೆ.
- ಅಕ್ಷರಗಳ ಸಂಖ್ಯೆ ಮತ್ತು ಗಣಗಳ ವಿಧಗಳಲ್ಲಿ ನಾಲ್ಕುಸಾಲುಗಳು ಸಮಾನವಾಗಿರುತ್ತದೆ.
- ಆದಿಪ್ರಾಸದಿಂದ ಕೂಡಿರುತ್ತದೆ.

**ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಒಂದು ಸಾಲನ್ನು ನೀಡಿರುತ್ತಾರೆ.**

## ಉತ್ಪಲಮಾಲಾವೃತ್ತ

**ಲಕ್ಷಣಗಳು :**

- 20 ಅಕ್ಷರಗಳು ಇರುತ್ತವೆ
- 28 ಮಾತ್ರೆಗಳಿರುತ್ತವೆ.
- ಭ, ರ, ನ, ಭ, ಭ, ರ, ಗಣಗಳು ಮತ್ತು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಇರುತ್ತವೆ.
- ಪಾದದ ಆದಿಯಲ್ಲಿ ಒಂದು ಗುರು ಬಂದಿರುತ್ತದೆ. (ಗುರು ಒಂದು ಆದಿಯೊಳ್ ಉತ್ಪಲಂ)

(20 ಅಕ್ಷರಗಳು / 28 ಮಾತ್ರೆಗಳು / 'ಭರನಭಭರ'ಲಗ ಗಣಗಳು / ಪಾದದ ಆದಿಯಲ್ಲಿ – [ಗುರು])



Scanned by CamScanner

**ಉದಾಹರಣೆ :-**

| ಭ | ರ | ನ | ಭ | ಭ | ರ | ಲಗ |
|---|---|---|---|---|---|---|
| - UU | - U - | UUU | - U U | - UU | - U - | U- |
| ಮೇದಿನಿ | ಯಂ ಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

**ಛಂದಸ್ಸು- ಉತ್ಪಲ ಮಾಲಾ ವೃತ್ತ**

**ಅಭ್ಯಾಸಕ್ಕಾಗಿ**

ಚಾಗದ ಭೋಗದಕ್ಕರದಗೇಯದ ಗೊಟ್ಟಿಯಲಂಪಿನಿಂ ಪುಗಳ್

## ಚಂಪಕ ಮಾಲಾ ವೃತ್ತ

**ಲಕ್ಷಣಗಳು :**

- 21 ಅಕ್ಷರಗಳು ಇರುತ್ತವೆ.
- 28 ಮಾತ್ರೆಗಳು ಇರುತ್ತವೆ.
- ನ, ಜ, ಭ, ಜ, ಜ, ಜ, ರ ಗಣಗಳು ಬರುತ್ತವೆ.
- ಪಾದದ ಆದಿಯಲ್ಲಿ 4 ಲಘು ಬರುತ್ತದೆ. (ಲಘು ನಾಲ್ಕಾಗಿರಲ್ ಚಂಪಕಂ )

**{ 20 ಅಕ್ಷರಗಳು / 28 ಮಾತ್ರೆಗಳು / 'ನಜಭಜಜಜರ' ಗಣಗಳ / ಪಾದದ ಆದಿಯಲ್ಲಿ UUUU (ನಾಲ್ಕು ಲಘು) }**

**ಉದಾಹರಣೆ :-**

**ಕುರುಕುಳ ನಂದನಂ ಪವನನಂದನನೆಂಬ ಮದಾಂಧ ಗಂಧಸಿಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U - U | - U U | U - U | U - U | U - U | - U - |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಧ | ಗಂಧಸಿ |

**ಛಂದಸ್ಸು- ಚಂಪಕ ಮಾಲಾ ವೃತ್ತ**



Scanned by CamScanner

ಅಭ್ಯಾಸಕ್ಕಾಗಿ

ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್

## ಮತ್ತೇಭ ವಿಕ್ರೀಡಿತ ವೃತ್ತ

ಲಕ್ಷಣಗಳು :

- 20 ಅಕ್ಷರಗಳು ಬರುತ್ತವೆ.
- 30 ಮಾತ್ರೆಗಳು ಬರುತ್ತವೆ.
- **ಸ,ಭ,ರ,ನ,ಮ,ಯ** ಗಣಗಳು ಮತ್ತು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಬರುತ್ತದೆ.
- ಪಾದದ ಆದಿಯಲ್ಲಿ 2 ಲಘು 2 ಗುರು ಬರುತ್ತವೆ. ( ಲಘು ದ್ವಂದ್ವಂ ಗುರುದ್ವಂದ್ವಮಾಗಿರೆ ಮತ್ತೇಭ )

**( 20 ಅಕ್ಷರಗಳು/30 ಮಾತ್ರೆಗಳು/ 'ಸಭರನಮಯ' ಲಗ ಗಣಗಳು/ಪಾದದ ಆದಿಯಲ್ಲಿ UU-- )**

**ಉದಾಹರಣೆ :-**

**ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ**

**(2016 ಮಾರ್ಚ್)**

| ಸ | ಭ | ರ | ನ | ಮ | ಯ | ಲಗ |
|---|---|---|---|---|---|---|
| UU- | - U U | - U - | UUU | - - - | U - - | U - |
| ಎನಗಂ | ಪಾಂಡುಗ | ಮಿಲ್ಲ ಭೇ | ದಮಿಳೆ | ಯಂ ಪಚ್ಚಾ | ಳ್ವ ಮಾ ಪಾಂ | ಡುನಂ |

**ಛಂದಸ್ಸು – ಮತ್ತೇಭ ವಿಕ್ರೀಡಿತ ವೃತ್ತ**

ಅಭ್ಯಾಸಕ್ಕಾಗಿ

ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗಸಾ



Scanned by CamScanner

# ಅಲಂಕಾರಗಳು

**ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಶಬ್ಧಾರ್ಥ ವೈಚಿತ್ರ್ಯಗಳೆ ಅಲಂಕಾರಗಳು.**

ಅಲಂಕಾರದಲ್ಲಿ **'ಶಬ್ದಾಲಂಕಾರ',** ಮತ್ತು **'ಅರ್ಥಾಲಂಕಾರ'** ಎಂದು ಎರಡು ವಿಭಾಗಗಳಿವೆ.

## ಶಬ್ದಾಲಂಕಾರ

✓ – ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದನ್ನು **ಶಬ್ದಾಲಂಕಾರ.**

ಇದರಲ್ಲಿ **ಅನುಪ್ರಾಸ, ಯಮಕ** ಮತ್ತು **ಚಿತ್ರಕವಿತ್ವ** ಎಂದು ಮೂರು ವಿಭಾಗಗಳಿವೆ.

✸ **ಅನುಪ್ರಾಸ** : ಅಕ್ಷರಗಳ ಆವೃತ್ತತೆಯೆ ಅನುಪ್ರಾಸ.

ಅನುಪ್ರಾಸವನ್ನು **ವೃತ್ತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂಬುದಾಗಿ ಮತ್ತೆ ವಿಭಾಗಿಸಲಾಗಿದೆ.

● **ವೃತ್ತ್ಯನುಪ್ರಾಸ** :– ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅಂದರೆ ಪುನರಾವರ್ತನೆಗೊಂಡರೆ ಅದನ್ನು **ವೃತ್ತ್ಯನುಪ್ರಾಸ** ಎಂದು ಕರೆಯುತ್ತಾರೆ.

ಉದಾ:– "ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು"

● **ಛೇಕಾನುಪ್ರಾಸ** :– ಎರಡೆರಡು ವ್ಯಂಜನಗಳು ಪುನರಾವರ್ತನೆಗೊಂಡರೆ ಅದನ್ನು **ಛೇಕಾನುಪ್ರಾಸ** ಎನ್ನುತ್ತಾರೆ.

ಉದಾ:–

ಕೆಲದೊಳ್ ಪುಳಿಂದಿಯಿರೆ ಪೆ ।
ರ್ಬುಲಿ ಬಂದೊಡಮಂಜನಕ್ಕ **ನೋಡಂನೋಡಂ** ॥
ಚಲದಿಂ **ಕಾಡಂಕಾಡಂ** ।
ಸಲೆ ಪಸಿವಂ ಮರೆದು ತಣಿದು **ಬೇಡಂಬೇಡಂ** ॥

✸ **ಯಮಕ** :– ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ, ಪದಭಾಗವಾಗಲಿ ಒಂದು ಪದ್ಯದ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ನಿಯತವಾಗಿ ಪುನಃ ಪುನಃ ಬಂದರೆ ಅದು **ಯಮಕಾಲಂಕಾರ** ವೆನಿಸುವುದು.

**ಅಮಳ್ಗಳ್** ನಯವಿಕ್ರಮಗುಣ ।
**ದಮಳ್ಗಳ್** ನೃಪಶಾಸ್ತ್ರ ಪರಿಣತರವರಂ ॥
**ಸಮರ**ದೊಳಗಗ್ರ ಶೌರ್ಯಂ ।
**ಸಮರಸ** ಸಂಪನ್ನನಾವನುದಾರನಪ್ಪನ್ ॥



Scanned by CamScanner

✷ **ಚಿತ್ರಕವಿತ್ವ** :– ವೈಚಿತ್ರ್ಯಪೂರ್ಣವಾಗಿ ಅಕ್ಷರಗಳನ್ನೂ, ಪದಗಳನ್ನೂ ಜೋಡಿಸಿ ಪದ್ಯರಚಿಸುವುದು **ಚಿತ್ರಕವಿತ್ವ .** ಇದರಲ್ಲಿ ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳಿವೆ.

**ಉದಾ: ನನ್ದನ ನನ್ದನ ನಿನ್ನೋನನ್ದನ**

**ಮನ್ದದ ಮನ್ದಿಯ ಅನ್ದದ ಚನ್ದನವನ**

## ಅರ್ಥಾಲಂಕಾರ

✓ – ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಅಥವಾ ಅರ್ಥದ ಸೌಂದರ್ಯ ಹೆಚ್ಚಿದರೆ ಅದನ್ನು **ಅರ್ಥಾಲಂಕಾರ.**

### ಪರಿಕಲ್ಪನೆಗಳು

**ಉಪಮೇಯ**: ವಾಕ್ಯದಲ್ಲಿ ಕವಿ ಯಾವುದನ್ನು ವರ್ಣಿಸುತ್ತಾನೋ ಅದು ಉಪಮೇಯ. (ವರ್ಣಿಸಿಕೊಳ್ಳುವ ಪದ)

**ಉಪಮಾನ** : ಯಾವ ವಸ್ತುವನ್ನು ಆಧಾರವಾಗಿಟ್ಟುಕೊಂಡು ಅಥವಾ ಮಾನವನ್ನಾಗಿಟ್ಟುಕೊಂಡು ವರ್ಣಿಸಲಾಗಿದೆಯೋ ಅದು ಉಪಮಾನ. (ವರ್ಣಿಸುವ ಪದ)

**ಉಪಮ ವಾಚಕ** : ಉಪಮೇಯ , ಉಪಮಾನಗಳನ್ನು ಕೂಡಿಸುವ ಪದ

**ಸಾಧರಣ ಧರ್ಮ** : ಗುಣ ಕ್ರಿಯೆಗಳು

## ಉಪಮಾಲಂಕಾರ

**ಲಕ್ಷಣ :** ಉಪಮಾ ಎಂದರೆ ಹೋಲಿಕೆ ಎಂದರ್ಥ. ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುವ ಅಲಂಕಾರವೇ ಉಪಮಾಲಂಕಾರ

1) **“ ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ ”**

2) **“ ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ ”**

3) **“ ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ ”** (2016 ಜೂನ್)

4) **“ ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ ”** (2016 ಮಾರ್ಚ್) (2016 ಜೂನ್)

5) **“ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.”**

6) **“ ಸೀತೆಯ ಮುಖ ಕಮಲದಂತೆ ಅರಳಿತು ”**



Scanned by CamScanner

ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. **01x 03 =03**

ಅಂಕ ವಿತರಣೆ
ಅಲಂಕಾರದ ಹೆಸರು –1 ಅಂಕ
ಸಮನ್ವಯ –1 ಅಂಕ
ಲಕ್ಷಣ – 1 ಅಂಕ
ಒಟ್ಟು – 3 ಅಂಕಗಳು

1) ' ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ '

**ಅಲಂಕಾರ :– ಉಪಮಾಲಂಕಾರ**

**ಉಪಮೇಯ :–** ಸತಿಪತಿಗಳೊಂದಾಗದವನ ಭಕ್ತಿ

**ಉಪಮಾನ :–**ಅಮೃತದೊಳು ಬೆರೆತ ವಿಷ

**ಉಪಮಾ ವಾಚಕ :–** ಅಂತೆ

**ಸಮಾನ ಧರ್ಮ :–** ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)

**ಸಮನ್ವಯ :–** ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನು ಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

**ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'**

2) " ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ "

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :–** ಒಳಗಿನ ಮಂದಿ ಗುಂಡು ಹೊಡೆಯುವುದು

**ಉಪಮಾನ :– ಮುಂಗಾರಿನ** ಸಿಡಿಲು ಸಿಡಿಯುವುದು

**ಉಪಮಾ ವಾಚಕ :–**ಹಾಂಗ

**ಸಮಾನ ಧರ್ಮ :–**ಸುರಿಯುವುದು

**ಸಮನ್ವಯ :– ಇಲ್ಲಿ ಉಪಮೇಯವಾದ** ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '**



Scanned by CamScanner

3) **"ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"** (2016 ಜೂನ್)

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :–**ಗುಂಡು ಸುರಿಯುವುದು

**ಉಪಮಾನ :–**ಸಿಡಿಲು ಸಿಡಿಯುವುದು

**ಉಪಮಾ ವಾಚಕ :–**ಹಾಂಗ

**ಸಮಾನ ಧರ್ಮ :–**ಸುರಿಯುವುದು

**ಸಮನ್ವಯ :– ಇಲ್ಲಿ ಉಪಮೇಯವಾದ** ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '

4) **"ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ "** (2016 ಮಾರ್ಚ್) (2016 ಜೂನ್)

ಅಲಂಕಾರ :– ಉಪಮಾಲಂಕಾರ

**ಉಪಮೇಯ** :– ನೀಚರಿಗೆ ಮಾಡುವ ಉಪಕಾರ

**ಉಪಮಾನ** :– ಹಾವಿಗೆ ಎರೆದ ಹಾಲು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ಪ್ರಯೋಜನವಿಲ್ಲ)

**ಸಮನ್ವಯ** :– ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '



Scanned by CamScanner

**5) "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"**

**ಅಲಂಕಾರ :- ಉಪಮಾಲಂಕಾರ**

**ಉಪಮೇಯ** :– ಭೀಮ ದುರ್ಯೋಧನರು

**ಉಪಮಾನ** :– ಮದಗಜಗಳು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಹೋರಾಡುವುದು

**ಸಮನ್ವಯ** :– ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '

**ಅಭ್ಯಾಸಕ್ಕಾಗಿ**

**6) " ಸೀತೆಯ ಮುಖ ಕಮಲದಂತೆ ಅರಳಿತು "**

**ಅಲಂಕಾರ :-**

**ಉಪಮೇಯ** :–

**ಉಪಮಾನ** :–

**ಉಪಮಾ ವಾಚಕ** :–

**ಸಮಾನ ಧರ್ಮ** :–

**ಸಮನ್ವಯ** :–

**ಲಕ್ಷಣ** :–



Scanned by CamScanner

## ರೂಪಕಾಲಂಕಾರ

**ಲಕ್ಷಣ:**

↓ **ಉಪಮೇಯ–ಉಪಮಾನಗಳಲ್ಲಿ ಅಭೇಧತೆಯನ್ನು ಕಲ್ಪಿಸುವುದು ರೂಪಕಾಲಂಕಾರ.**

↓ **ಉಪಮೇಯ–ಉಪಮಾನಗಳಲ್ಲಿ ವ್ಯತ್ಯಾಸ ಇಲ್ಲ ಅವೆರಡು ಒಂದೇ ಎಂದು ಹೇಳುವುದು ರೂಪಕಾಲಂಕಾರ.**

***********

1) **" ಮಾರಿಗೌತಣವಾಯ್ತು ನಾಳಿನ ಭಾರತವು "**

2) **"ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ "**

3) **" ಸೀತೆಯ ಮುಖಕಮಲ ಅರಳಿತು."**

2. **'ಮಾರಿಗೌತಣವಾಯ್ತು ನಾಳಿನ ಭಾರತವು'** (2016 ಮಾರ್ಚ್)

**ಅಲಂಕಾರ :– ರೂಪಕಾಲಂಕಾರ**

**ಉಪಮೇಯ :–** ನಾಳಿನ ಭಾರತ ಯುದ್ಧ

**ಉಪಮಾನ :–** ಮಾರಿಯ ಔತಣ

**ಸಮನ್ವಯ** :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಅಭೇಧತೆಯನ್ನು ಹೇಳುವುದು **'ರೂಪಕಾಲಂಕಾರ'**.

1. **ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ**

**ಅಲಂಕಾರ :– ರೂಪಕಾಲಂಕಾರ**

**ಉಪಮೇಯ :–** ಒಡಲಬೇಗೆ

**ಉಪಮಾನ :–** ಬೆಂಕಿಯುರಿ

**ಸಮನ್ವಯ** :– ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

**ಲಕ್ಷಣ :–** ಉಪಮೇಯ ಮತ್ತು ಉಪಮಾನಗಳಿಗೆ ಅಭೇಧತೆಯನ್ನು ಹೇಳುವುದು **'ರೂಪಕಾಲಂಕಾರ'**.

3) **" ಸೀತೆಯ ಮುಖಕಮಲ ಅರಳಿತು."**

**ಅಲಂಕಾರ :–**

**ಉಪಮೇಯ :–**

**ಉಪಮಾನ :–**

**ಸಮನ್ವಯ** :–

**ಲಕ್ಷಣ :–**



Scanned by CamScanner

## ದೃಷ್ಟಾಂತಾಲಂಕಾರ

**ಲಕ್ಷಣ:** ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು **ದೃಷ್ಟಾಂತಾಲಂಕಾರ** .

**ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**

ಅಲಂಕಾರ :– **ದೃಷ್ಟಾಂತಾಲಂಕಾರ**

ಉಪಮೇಯ :– ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ :– ಊಟ ಬಲ್ಲವನಿಗೆ ರೋಗವಿಲ್ಲ

ಸಮನ್ವಯ :– ಇಲ್ಲಿ ಉಪಮೇಯವಾದ **ಮಾತುಬಲ್ಲವನಿಗೆ ಜಗಳವಿಲ್ಲ** ಹಾಗೂ ಉಪಮಾನವಾದ **ಊಟ ಬಲ್ಲವನಿಗೆ ರೋಗವಿಲ್ಲ** ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ

**ಲಕ್ಷಣ:** ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು **ದೃಷ್ಟಾಂತಾಲಂಕಾರ**

📖 **ಅಭ್ಯಾಸಕ್ಕಾಗಿ**

**ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ**

## ಉತ್ಪ್ರೇಕ್ಷಾಲಂಕಾರ

**ಲಕ್ಷಣ :** ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ **ಉತ್ಪ್ರೇಕ್ಷಾಲಂಕಾರ**.

**ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

**ಅಲಂಕಾರ :– ಉತ್ಪ್ರೇಕ್ಷಾಲಂಕಾರ .**

**ಉಪಮೇಯ :–** ಅಚ್ಛೋದ ಸರೋವರ

**ಉಪಮಾನ** :– ರನ್ನಗನ್ನಡಿ

**ಸಮನ್ವಯ :–** ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

**ಲಕ್ಷಣ :** ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ **ಉತ್ಪ್ರೇಕ್ಷಾಲಂಕಾರ**.

- **ಅಭ್ಯಾಸಕ್ಕಾಗಿ**

‘ **ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು** ’

‘ **ವಿದ್ವಾಂಸನಾದ ಆತನು ಸಾಕ್ಷಾತ್ ಸರಸ್ವತಿಯೋ ಎಂಬಂತೆ ಬೆಳಗಿದನು** ’



Scanned by CamScanner

## ಅರ್ಥಾಂತರನ್ಯಾಸಾಲಂಕಾರ

**ಲಕ್ಷಣ :–** ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯವಾಕ್ಯವನ್ನು ವಿಶೇಷವಾಕ್ಯದಿಂದ ಸಮರ್ಥನೆಮಾಡುವುದೇ ಅರ್ಥಾಂತರನ್ಯಾಸಾಲಂಕಾರವೆನಿಸುತ್ತದೆ.

**'ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?'**

**ಅಲಂಕಾರ :– ಅರ್ಥಾಂತರನ್ಯಾಸಾಲಂಕಾರ.**

ಉಪಮೇಯ (ವಿಶೇಷವಾಕ್ಯ) :– ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

ಉಪಮಾನ ( ಸಾಮಾನ್ಯ ವಾಕ್ಯ) :– ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಸಮನ್ವಯ :– ಇಲ್ಲಿ ಉಪಮೇಯವಾದ ' ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು' ಎಂಬ ವಿಶೇಷವಾಕ್ಯವನ್ನು ಉಪಮಾನವಾದ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?' ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಲಾಗಿದೆ.

**ಲಕ್ಷಣ :–** ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯವಾಕ್ಯವನ್ನು ವಿಶೇಷವಾಕ್ಯದಿಂದ ಸಮರ್ಥನೆಮಾಡುವುದೇ ಅರ್ಥಾಂತರನ್ಯಾಸಾಲಂಕಾರವೆನಿಸುತ್ತದೆ.

- ಅಭ್ಯಾಸಕ್ಕಾಗಿ

' ಆತನು ಉಂಡಮನೆಗೆ ಕೇಡು ಬಗೆದನು. ಕೃತಘ್ನರು ಏನನ್ನು ತಾನೆ ಮಾಡವುದಿಲ್ಲ ! '



**ನಿರಂತರ ಅಭ್ಯಾಸ ಯಶಸ್ಸಿನ ಗುಟ್ಟು**

**ಶುಭವಾಗಲಿ**



Scanned by CamScanner